ಸಂಪುಟ 01 । ಸಂಚಿಕೆ 234 ಗುರುವಾರ 29 ಅಕ್ಟೋಬರ್ 2026 । ಪುಟ 4 । ಬೆಲೆ-2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)ವಿಶ್ವ ಪಾರ್ಶ್ವವಾಯು ದಿನ (World Stroke Day)

ಪ್ರತಿ ವರ್ಷ ಅಕ್ಟೋಬರ್ 29ರಂದು ವಿಶ್ವ ಪಾರ್ಶ್ವವಾಯು ದಿನವನ್ನು ಆಚರಿಸಲಾಗುತ್ತದೆ. ಪಾರ್ಶ್ವವಾಯುವಿನ ಲಕ್ಷಣಗಳು, ತಡೆಗಟ್ಟುವಿಕೆ ಮತ್ತು ಸಮಯಕ್ಕೆ ಸರಿಯಾದ ಚಿಕಿತ್ಸೆಯ ಮಹತ್ವದ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶವಾಗಿದೆ.

2. ಅಂತರರಾಷ್ಟ್ರೀಯ ಆರೈಕೆ ಮತ್ತು ಬೆಂಬಲ ದಿನ (International Day of Care and Support)

ಆರೈಕೆ ಕಾರ್ಯಕರ್ತರು, ಕುಟುಂಬದ ಸದಸ್ಯರು ಹಾಗೂ ಇತರರಿಗೆ ನೆರವು ನೀಡುವವರ ಕೊಡುಗೆಯನ್ನು ಗೌರವಿಸಲು ಈ ದಿನವನ್ನು ಆಚರಿಸಲಾಗುತ್ತದೆ. ಸಮಾಜದಲ್ಲಿ ಆರೈಕೆ ಮತ್ತು ಬೆಂಬಲ ವ್ಯವಸ್ಥೆಗಳ ಮಹತ್ವವನ್ನು ತಿಳಿಸುವುದು ಇದರ ಉದ್ದೇಶವಾಗಿದೆ.

ಸುಭಾಷಿತ

ಒಮ್ಮೆ ನೀವು ಯಾವುದಾದರೂ ಕೆಲಸ ಮಾಡಲು ಪ್ರಾರಂಭಿಸಿದ ಬಳಿಕ ಸೋಲಿನ ಬಗ್ಗೆ ಭಯ ಪಡಬೇಡಿ ಅಥವಾ ಹಿಂದಡಿ ಇಡಬೇಡಿ

–ಚಾಣಕ್ಯ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಬಿಜೆಪಿಗೆ ಒಳ್ಳೆ ದಿನ ಶುರು–ಬಿವೈವಿ

❏ ನೈಜ್ಯ ದೆಸೆ ನ್ಯೂಸ್

ಮೈಸೂರು: ಬಿಜೆಪಿಗೆ ಒಳ್ಳೆಯ ದಿನಗಳು ಶುರುವಾಗಿದೆ, ಇದರಲ್ಲಿ ಯಾವುದೇ ಅನುಮಾನ ಬೇಡ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಇಂದು 'ಪ್ರಜಾಪ್ರಭುತ್ವ ಉಳಿಸಿ, ಅರಾಜಕತೆಯನ್ನು ಅಳಿಸಿ' ಎಂಬ ಶೀರ್ಷಿಕೆಯಡಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ವಿಧಾನ ಪರಿಷತ್ ಚುನಾವಣೆಯಲ್ಲಿ 4 ಕ್ಷೇತ್ರಗಳಲ್ಲೂ ಎನ್.ಡಿ.ಎ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ ಸಂತಸ ವ್ಯಕ್ತಪಡಿಸಿದರು. ಸೋಲಿಲ್ಲದ ಸರದಾರನಿಗೆ ಸೋಲು.. ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ನಮ್ಮ ಅಭ್ಯರ್ಥಿ 23 ಸಾವಿರ ಮತಗಳ ಅಂತರದಲ್ಲಿ ಗೆದ್ದಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲೂ ನಮ್ಮ ಅಭ್ಯರ್ಥಿಗಳು ವಿಜಯ ಸಾಧಿಸಿದ್ದಾರೆ. ಸೋಲಿಲ್ಲದ ಸರದಾರ ಎಂದು ಮೆರೆಯುತ್ತಿದ್ದ ಕಾಂಗ್ರೆಸ್ ಅಭ್ಯರ್ಥಿಯನ್ನು 900ಕ್ಕೂ ಹೆಚ್ಚು ಮತಗಳ ಅಂತರದಲ್ಲಿ ಸೋಲಿಸಿದ್ದಾರೆ. ರಾಜ್ಯದ ಪ್ರಜ್ಞಾವಂತ ಮತದಾರರಿಗೆ, ಬಿಜೆಪಿ–ಜೆಡಿ–ಎಸ್ ಮುಖಂಡರು ಮತ್ತು ಕಾರ್ಯಕರ್ತರಿಗೆ ಧನ್ಯವಾದ ಅರ್ಪಿಸುತ್ತೇನೆ ಎಂದು ಹೇಳಿದರು.

ಈ ಫಲಿತಾಂಶ ನಾನಾ ರೀತಿಯ ವಿಶ್ಲೇಷಣೆಗೆ ಕಾರಣವಾಗಿದೆ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳ ಭ್ರಮೆಯಲ್ಲಿದೆ. ಅಧಿಕಾರದ ಅಮಲಿನಲ್ಲಿ ತೇಲುತ್ತಿದೆ.



ನಾಡಿನ ರೈತರ ಜೊತೆ ಚೆಲ್ಲಾಟವಾಡಿ ಒಂದೇ ಒಂದು ಕೆಲಸ ಮಾಡಿಲ್ಲ. ಬರಗಾಲದ ಪರಿಹಾರ ಕೊಡಲು ಸಾಧ್ಯವಾಗಿಲ್ಲ, ಉದ್ಯೋಗ ಕೊಡಲು ಆಗುತ್ತಿಲ್ಲ. ಮುಡಾ ಹಗರಣ, ವಾಲ್ಮೀಕಿ ಹಗರಣ, ಸಚಿವರ ರಾಜೀನಾಮೆ ಇದೇ ಕಾಂಗ್ರೆಸ್ ಆಡಳಿತ. ಬಳ್ಳಾರಿ ಚಲೋ ಮೂಲಕ ಕಾಂಗ್ರೆಸ್ ಬಣ್ಣ ಬಯಲು ಮಾಡಿದ್ದೇವೆ. ನಮ್ಮ ಹೋರಾಟದ ಪರಿಣಾಮ ಜನರು ಈ ಬಾರಿ ಎನ್.ಡಿ.ಎ ಸರ್ಕಾರ ತರಲು ಚಿಂತನೆ ನಡೆಸಿದ್ದಾರೆ ಎಂದು ಹೇಳಿದರು.

ಈ ಚುನಾವಣೆ ಫಲಿತಾಂಶ 120 ರಿಂದ 130 ಕ್ಷೇತ್ರದ ಮತದಾರರು ಕೊಟ್ಟಿರುವ ತೀರ್ಪು. ಸಿಎಂ ಮತ್ತು ಡಿಸಿಎಂ ಕಪಟ ನಾಟಕ ಆಡುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರವನ್ನು ಬುಡಸಮೇತ ಕಿತ್ತು ಹಾಕುವ ತೀರ್ಮಾನಕ್ಕೆ ಜನ ಬಂದಿದ್ದಾರೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿದೆ. ಇದು ಮೊದಲು ಅಧಿಕಾರ ಬಿಟ್ಟು ಹೋಗಿ ಎಂಬ ಸಂದೇಶ. ಬಿಜೆಪಿಗೆ ಆಶೀರ್ವಾದ ಮಾಡಲು ಮತದಾರರು ಸಿದ್ಧರಾಗಿದ್ದಾರೆ. ನಿಮ್ಮ ಸಣ್ಣಪುಟ್ಟ ಗೊಂದಲ ಬದಿಗಿಟ್ಟು ಎಲ್ಲರೂ ಒಗ್ಗಟ್ಟಿನಿಂದ ಹೋಗಿ ಎಂಬ ಸಂದೇಶವನ್ನು ಜನರು ಬಿಜೆಪಿಗೂ ಕೊಟ್ಟಿದ್ದಾರೆ ಎಂದು ನುಡಿದರು. ಚುನಾವಣೆಸುದ್ದಿ ಓದಿ

ಪ್ರಧಾನಿಯಾಗುವ ಆಸೆಗೆ ರಾಹುಲ್ ಗಾಂಧಿ ದೇಶದಲ್ಲಿ ಅರಾಜಕತೆ ಸೃಷ್ಟಿಸಲು ಮುಂದಾಗಿದ್ದಾರೆ. ಈ ಚುನಾವಣೆ ಅವರಿಗೂ ಸ್ಪಷ್ಟ ಸಂದೇಶ. ಬ್ಯಾಲೆಟ್ ಪೇಪರ್ ಬಳಸಿ ನಡೆಸಿದ ಈ ಚುನಾವಣೆಯಲ್ಲೂ ಕಾಂಗ್ರೆಸ್ ಸೋತಿದೆ. ಕಾಂಗ್ರೆಸ್ ಗೆ ಯಾವುದರ ಮೇಲೂ ನಂಬಿಕೆ ಇಲ್ಲ. ಈ ಫಲಿತಾಂಶವನ್ನು ಸಿಎಂ, ಡಿಸಿಎಂ ಮತ್ತು ರಾಹುಲ್ ಗಾಂಧಿಗೆ ತಲುಪಿಸಬೇಕು. ಮುಂದಿನ ಬಾರಿ ರಾಜ್ಯದಲ್ಲಿ ಎನ್.ಡಿ.ಎ ಸರ್ಕಾರ ಬರುವುದು ಖಚಿತ. ಇದನ್ನು ತಡೆಯಲು ಯಾವುದೇ ಕೆಟ್ಟ ಶಕ್ತಿಗಳಿಗೂ ಸಾಧ್ಯವಿಲ್ಲ ಎಂದು ವಾಗ್ದಾಳಿ ನಡೆಸಿದರು. ರಾಜ್ಯದಲ್ಲಿ ಬರವಿದೆ, ಪರಿಹಾರ ಘೋಷಣೆ ಮಾಡಿದರೂ ಅದು ಘೋಷಣೆಯಾಗಿ ಉಳಿದಿದೆ. ಕಬ್ಬು ಬೆಳೆಗಾರರಿಗೆ ಸಿಹಿ ಸುದ್ದಿ ಕೊಡುತ್ತಾರೆ ಎಂದು ಜನ ಕಾಯುತ್ತಿದ್ದರು. ವಿಶೇಷ ವಿಮಾನದಲ್ಲಿ ಸಿಎಂ ಬೆಳಗಾವಿಗೆ ಹೋಗಿ, ಬೊಕ್ಕಸದಲ್ಲಿ ಹಣ ಇಲ್ಲ, ನಮಗೆ ಸಮಯ ಕೊಡಿ ಎಂದಿದ್ದಾರೆ. ಇದು ನಾಚಿಕೆಗೇಡು. ಇದನ್ನು ಹೇಳಲು ವಿಶೇಷ ವಿಮಾನದಲ್ಲಿ ಹೋಗಬೇಕಿತ್ತಾ? ಕಬ್ಬಿನಿಂದ ರಾಜ್ಯಕ್ಕೆ ದೊಡ್ಡ ಆದಾಯ ಬರುತ್ತಿದೆ. ಕಬ್ಬಿನ ಉಪ ಉತ್ಪನ್ನಗಳಿಂದ ಲಾಭ ಬರುತ್ತಿದೆ. ಪ್ರತಿ ಟನ್ ಕಬ್ಬಿಗೆ 9234 ರೂಪಾಯಿ ರಾಜ್ಯ ಸರ್ಕಾರಕ್ಕೆ ಬರುತ್ತದೆ. ಪ್ರತಿ ವರ್ಷ 15 ಸಾವಿರ ಕೋಟಿ ಆದಾಯ ಕಬ್ಬಿನಿಂದ ಬರುತ್ತಿದೆ. ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವುದು ಬಿಟ್ಟು, ರೈತರಿಗೆ 500 ರೂಪಾಯಿ ಪ್ರೋ?ರೀತ್ಸಾಹ ಧನ ನೀಡಿ, ರೈತರ ಜೀವನದ ಜೊತೆ ಚೆಲ್ಲಾಟ ಆಡುವುದನ್ನು ಬಿಡಿ ಎಂದು ಸಿಎಂ ಮತ್ತು ಡಿಸಿಎಂಗೆ ಸಲಹೆ ನೀಡಿದರು.

ಮೋದಿ ವಿರುದ್ಧ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿ, ನಾಲಿಗೆ ಹರಿಬಿಟ್ಟವರಿಗೆ ಜನ ಬುದ್ಧಿ ಕಲಿಸುತ್ತಾರೆ. ನಿನ್ನೆಯ ಚುನಾವಣೆ ಫಲಿತಾಂಶ ಮುಂದಿನ ವಿಧಾನಸಭಾ ಚುನಾವಣೆಗೆ ದಿಕ್ಸೂಚಿ. ನಾವು 130 ಸೀಟು ಗೆಲ್ಲುತ್ತೇವೆ. ಇದು ಅಹಂಕಾರದ ಮಾತಲ್ಲ, ಆತ್ಮವಿಶ್ವಾಸದ ಮಾತು ಎಂದರು.

ವಿಧಾನ ಪರಿಷತ್ ಚುನಾವಣೆ: ಎನ್‌ಡಿಎ ಭರ್ಜರಿ ಗೆಲುವು; ಸಿರುಗುಪ್ಪದಲ್ಲಿ ಬಿಜೆಪಿ ವಿಜಯೋತ್ಸವ

❏ ನೈಜ್ಯ ದೆಸೆ ನ್ಯೂಸ್

ಸಿರುಗುಪ್ಪ: (ಬಳ್ಳಾರಿ), ಅ. 28: ಇತ್ತೀಚೆಗೆ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಎನ್‌ಡಿಎ (ಬಿಜೆಪಿ–ಜೆಡಿಎಸ್) ಮೈತ್ರಿಕೂಟದ ಅಭ್ಯರ್ಥಿಗಳು ಭರ್ಜರಿ ಜಯಭೇರಿ ಬಾರಿಸಿದ ಹಿನ್ನೆಲೆಯಲ್ಲಿ, ಇಲ್ಲಿನ ನಗರದ ಪ್ರಮುಖ ರಸ್ತೆಗಳಲ್ಲಿ ಭಾರತೀಯ ಜನತಾ ಪಾರ್ಟಿ (ಬಿಜೆಪಿ) ತಾಲೂಕು ಮಂಡಲದ ವತಿಯಿಂದ ಸೋಮವಾರ ಭವ್ಯ ವಿಜಯೋತ್ಸವ ಆಚರಿಸಲಾಯಿತು.

ಚುನಾವಣೆಯಲ್ಲಿ ಜಯಶೀಲರಾದ ಮೈತ್ರಿಕೂಟದ ಅಭ್ಯರ್ಥಿಗಳಾದ ಶ್ರೀ ಎಸ್. ವಿ. ಸಂಕನೂರು, ಶ್ರೀ ಕೆ. ಎಂ. ಸುರೇಶ, ಶ್ರೀ ಶಶೀಲ್ ನಮೋಶಿ ಹಾಗೂ ಶ್ರೀ ಎ. ಪಿ.



ರಂಗನಾಥ್ ಅವರಿಗೆ ಜಿಲ್ಲೆಯ ಮುಖಂಡರು ಹೃತ್ಪೂರ್ವಕ ಅಭಿನಂದನೆ ಸಲ್ಲಿಸಿದರು. ನಗರದ ಪ್ರಮುಖ ವೃತ್ತದಲ್ಲಿ ಜಮಾಯಿಸಿದ ಪಕ್ಷದ ನೂರಾರು ಕಾರ್ಯಕರ್ತರು ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ ಜಯಘೋಷ ಕೂಗುತ್ತಾ ವಿಜಯದ ಸಂಭ್ರಮವನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಬಿಜೆಪಿ ಮಂಡಲ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ ಅವರು, "ಮೈತ್ರಿಕೂಟದ ಅಭ್ಯರ್ಥಿಗಳ ಗೆಲುವು ಕಾರ್ಯಕರ್ತರ ಶ್ರಮ ಹಾಗೂ ಸರ್ಕಾರದ ಜನಪರ ನೀತಿಗಳಿಗೆ ಸಂದ ಜಯವಾಗಿದೆ" ಎಂದರು. ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ವೀರನಗೌಡರು ಮಾತನಾಡಿ, ಈ ಫಲಿತಾಂಶವು ಮುಂಬರುವ ದಿನಗಳಲ್ಲಿ ಪಕ್ಷದ ಸಂಘಟನೆಗೆ ಮತ್ತಷ್ಟು ಬಲ ತುಂಬಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಪ್ರಮುಖ ಮುಖಂಡರಾದ ಎಂ. ಎಸ್. ಸಿದ್ದಪ್ಪ (ತೆಕ್ಕಲಕೋಟೆ), ನಗರಸಭೆ ಸದಸ್ಯರಾದ ಮೇಕೆಲಿ ವೀರೇಶ್, ಮೋಹನ್ ರೆಡ್ಡಿ, ನಟರಾಜ್, ರಾಮಕೃಷ್ಣ ಬಿ.ಇ., ಅವಿನಾಶ್, ಚಾಗಿಸುಬ್ಬಯ್ಯ ಬಿ.ಇ., ಮಧು, ಸದಾಶಿವ, ಶೇಖರ್ ಗೌಡ ಮಂಡರಿಗೆ, ಕೃಷ್ಣ, ಮುದಿಯಪ್ಪ, ಜಬಿವುಲ್ಲಾ, ರಾಮಕೃಷ್ಣ ಉಪಸ್ಥಿತರಿದ್ದರು. ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಮಾರೇಶ್, ಗಂಗಾಧರ್, ಶೇಖಪ್ಪ, ಶಿವಕುಮಾರ್, ದೊಡ್ಡನಗೌಡ, ಬಸವರಾಜ್ ಸೇರಿದಂತೆ ಪದಾಧಿಕಾರಿಗಳು, ಯುವ ಮೋರ್ಚಾ ಕಾರ್ಯಕರ್ತರು ಹಾಗೂ ಪಕ್ಷದ ಸಕ್ರಿಯ ಕಾರ್ಯಕರ್ತರು ವಿಜಯೋತ್ಸವದ ಮುಂಚೂಣಿಯಲ್ಲಿದ್ದರು.

ಸಿಂಧನೂರಿನಲ್ಲಿ ಭಿಕ್ಷಾಟನೆ ಮಾಡುತ್ತಿದ್ದ ಇಬ್ಬರು ಬಾಲಕಿಯರ ರಕ್ಷಣೆ

ವಿವಿಧ ಇಲಾಖೆಗಳ ಜಂಟಿ ಕಾರ್ಯಾಚರಣೆ; ಮಕ್ಕಳ ಕಲ್ಯಾಣ ಸಮಿತಿಗೆ ಹಸ್ತಾಂತರ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ಸಿಗ್ನಲ್ ಬಳಿ ಭಿಕ್ಷಾಟನೆ ಮಾಡುತ್ತಿದ್ದ ಇಬ್ಬರು ಬಾಲಕಿಯರನ್ನು ವಿವಿಧ ಇಲಾಖೆಗಳ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ ರಕ್ಷಿಸಿದ್ದಾರೆ.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಕುಮಾರ ಅವರ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಬಾಲಕಿಯರನ್ನು ರಕ್ಷಿಸಿ, ಅವರ ಮುಂದಿನ ಆರೈಕೆ ಮತ್ತು ಸುರಕ್ಷತೆಯ ದೃಷ್ಟಿಯಿಂದ ಸರ್ಕಾರಿ ಬಾಲಕಿಯರ ಬಾಲಮಂದಿರದ ಮೂಲಕ ರಾಯಚೂರು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗೆ ಹಸ್ತಾಂತರಿಸಲಾಗಿದೆ. ಮಕ್ಕಳ ಹಕ್ಕುಗಳ ರಕ್ಷಣೆ, ಅವರ ಸುರಕ್ಷತೆ ಹಾಗೂ ಸೂಕ್ತ ಆರೈಕೆಯನ್ನು ಖಚಿತಪಡಿಸುವ ಉದ್ದೇಶದಿಂದ ವಿವಿಧ ಇಲಾಖೆಗಳು ಸಮನ್ವಯದೊಂದಿಗೆ ಕಾರ್ಯಾಚರಣೆ ನಡೆಸಿದವು.

ಈ ಕಾರ್ಯಾಚರಣೆಯಲ್ಲಿ



ಮಕ್ಕಳ ರಕ್ಷಣಾ ಘಟಕ, ಮಕ್ಕಳ ಸಹಾಯವಾಣಿ, ಸಿಂಧನೂರು ಮತ್ತು ತುರ್ವಿಹಾಳ ಶಿಶು ಅಭಿವೃದ್ಧಿ ಯೋಜನೆಗಳ ಅಧಿಕಾರಿಗಳು, ಕಾರ್ಮಿಕ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಪೊಲೀಸ್ ಇಲಾಖೆಯ ಸಿಬ್ಬಂದಿ ಭಾಗವಹಿಸಿದ್ದರು. ಮಾರ್ಗದರ್ಶಿ ಸಂಸ್ಥೆಯ ಪ್ರತಿನಿಧಿಗಳೂ ಕಾರ್ಯಾಚರಣೆಗೆ ಸಹಕಾರ ನೀಡಿದರು.

ಮಕ್ಕಳು ಭಿಕ್ಷಾಟನೆಯಲ್ಲಿ ತೊಡಗಿರುವುದು ಕಂಡುಬಂದಲ್ಲಿ, ಅವರ ಪರಿಸ್ಥಿತಿಯನ್ನು ಪರಿಶೀಲಿಸಿ ಸೂಕ್ತ ರಕ್ಷಣೆ ಒದಗಿಸುವುದು ಸಂಬಂಧಪಟ್ಟ ಇಲಾಖೆಗಳ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಇಲಾಖೆಗಳ ಜಂಟಿ ಕಾರ್ಯಾಚರಣೆ ಮಹತ್ವ ಪಡೆದಿದೆ.

ಕಾಯಕದಲ್ಲಿ ನಿಷ್ಠೆ ಮತ್ತು ಬದುಕಿನಲ್ಲಿ ಸದಾಚಾರವಿದ್ದಾಗ ಮಾತ್ರ ಆತ್ಮಶುದ್ಧಿ ಸಾಧ್ಯ : ಶಿಕ್ಷಕ ಎ. ದೊಡ್ಡಬಸವ

❏ ನೈಜ್ಯ ದೆಸೆ ನ್ಯೂಸ್

ಕಂಪ್ಲಿ: "ಪರರ ಹಿತವನ್ನು ಮರೆತು ಕೇವಲ ಹೊಟ್ಟೆಪಾಡಿಗಾಗಿ ಅಥವಾ ಮೋಹಕ್ಕಾಗಿ ಕಾಯಕ ಮಾಡುವುದು ಸರಿಯಲ್ಲ. ಕಾಯಕದಲ್ಲಿ ನಿಷ್ಠೆ ಮತ್ತು ಬದುಕಿನಲ್ಲಿ ಸದಾಚಾರವಿದ್ದಾಗ ಮಾತ್ರ ಆತ್ಮಶುದ್ಧಿ ಸಾಧ್ಯ" ಎಂದು ಜವುಕು ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಎ. ದೊಡ್ಡಬಸವ ಹೇಳಿದರು.

ಇಲ್ಲಿನ ತಾಲೂಕು ಶರಣ ಸಾಹಿತ್ಯ ಪರಿಷತ್ ವತಿಯಿಂದ ಮಡಿವಾಳ ಮಾಚಿದೇವ ಸಮುದಾಯ ಭವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 195ನೇ 'ಮಹಾಮನೆ' ಕಾರ್ಯಕ್ರಮದಲ್ಲಿ 'ಮಡಿವಾಳ ಮಾಚಿದೇವ ವಚನ ಮತ್ತು ಮೌಲ್ಯಗಳು' ಎಂಬ ವಿಷಯದ ಕುರಿತು ಅವರು ಉಪನ್ಯಾಸ ನೀಡಿದರು. "ವಚನ ಸಾಹಿತ್ಯದಲ್ಲಿ ಸಾಮಾಜಿಕ ಕಳಕಳಿ ಅಡಗಿದೆ. ಪರರಿಗೆ ಒಳ್ಳೆಯದನ್ನು ಬಯಸುವುದೇ ನಿಜವಾದ ಶಿವಜ್ಞಾನ.



ಇಂದಿನ ದಿನಗಳಲ್ಲಿ ಸಣ್ಣಪುಟ್ಟ ತಪ್ಪು ತಿಳಿವಳಿಕೆಗಳಿಂದ ಸುಂದರ ಸಂಬಂಧಗಳು ದೂರವಾಗುತ್ತಿರುವುದು ವಿಷಾದನೀಯ" ಎಂದು ಕಳವಳ ವ್ಯಕ್ತಪಡಿಸಿದರು.

ಶರಣರು ಜಾತಿಗೆ ಸೀಮಿತವಲ್ಲ: ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಇಟಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಚಂದ್ರಯ್ಯ ಸೊಪ್ಪಿಮಠ ಮಾತನಾಡಿ, "ಶರಣರನ್ನು ಯಾವುದೇ ಒಂದು ನಿರ್ದಿಷ್ಟ ಜಾತಿ ಅಥವಾ ಕಾಯಕಕ್ಕೆ ಸೀಮಿತಗೊಳಿಸಬಾರದು.

ಇಂದಿನ ಯುವಕರು ಸಿನಿಮಾ ನಟರ ಅಭಿಮಾನಿಗಳಾಗುವ ಬದಲು, ಶರಣರ ತತ್ವ–ಆದರ್ಶಗಳ ಅಭಿಮಾನಿಗಳಾದರೆ ಜೀವನ ಶ್ರೇಷ್ಠ ಮಟ್ಟಕ್ಕೇರುತ್ತದೆ" ಎಂದರು.


ಸಾಧಕರಿಗೆಸನ್ಮಾನ: ಸಮಾಜ ಸೇವೆಯನ್ನು ಗುರುತಿಸಿ ಅಕ್ಕಿ ಗಿರಣಿ ಮಾಲೀಕರ ಸಂಘದ ಅಧ್ಯಕ್ಷ ಕೆ.ಎಂ. ಹೇಮಯ್ಯಸ್ವಾಮಿ, ನಿವೃತ್ತ ಶಿಕ್ಷಕ ಕೆ. ಚಂದ್ರಶೇಖರ್ ಹಾಗೂ ಉಪನ್ಯಾಸ ನೀಡಿದ ಶಿಕ್ಷಕ ಎ. ದೊಡ್ಡಬಸವ ಅವರನ್ನು ಇದೇ ಸಂದರ್ಭದಲ್ಲಿ ಗೌರವಿಸಿ, ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮಡಿವಾಳ ಸಮಾಜದ ತಾಲೂಕು ಅಧ್ಯಕ್ಷ ಮಡಿವಾಳ ಹುಲುಗಪ್ಪ, ನ್ಯಾಯವಾದಿ ಎಚ್. ನಾಗರಾಜ, ಪರಿಷತ್ ಕಾರ್ಯಾಧ್ಯಕ್ಷ ಬಂಗಿ ದೊಡ್ಡ ಮಂಜುನಾಥ, ಡಾ. ಬಿ. ಸುನಿಲ್, ಪೀರಾವಲಿ ಹಂಚಿನಾಳ, ಬಿ.ಎಂ. ರುದ್ರಯ್ಯ, ಎಸ್. ಶಾಮಸುಂದರರಾವ್, ಸುರೇಶ ಮರಿಶೆಟ್ರು, ಇಂದ್ರಿಪಿ ಮಲ್ಲಿಕಾರ್ಜುನ, ಎಸ್. ರಾಮು, ಅಶೋಕ ಕುಕನೂರು, ಎಲ್ಐಸಿ ಈರಣ್ಣ ಸೇರಿದಂತೆ ಮಡಿವಾಳ ಸಮುದಾಯದ ಪ್ರಮುಖರು ಉಪಸ್ಥಿತರಿದ್ದರು.

ವಿ ಬಿ ಜಿ ರಾಮ್ ಜಿ ಯೋಜನೆಯ ಕಾಮಗಾರಿಯಲ್ಲಿ ಮಲತಾಯಿ ಧೋರಣೆ ಮಾಡುತ್ತಿರುವ ಅಧಿಕಾರಿಗಳನ್ನು ಅಮಾನತುಗೊಳಿಸಲು ನಮ್ಮ ಕರವೇ ಒತ್ತಾಯ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಹಲ್ಕಾವಟಗಿ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಹಲ್ಕಾವಟಗಿ, ಅಂಕನಾಳ, ಉಪನಾಳ, ತೊಂಡಿಹಾಳ, ಪಲದಿನ್ನಿ ಗ್ರಾಮಗಳು ಬರುತ್ತವೆ. ಈ ಪಂಚಾಯಿತಿ ಹಳ್ಳಿಗಳ ಪೈಕಿ ಅಂಕನಾಳ ಹಾಗೂ ಉಪನಾಳ ಗ್ರಾಮಗಳಿಗೆ ವಿಕಸಿತ ಭಾರತ– ರೋಜ್ ಗಾರ್ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) ವಿ ಬಿ ಜಿ ರಾಮ್ ಜಿ ಯೋಜನೆಯಡಿ ಕಾಮಗಾರಿಯಲ್ಲಿ ಅಧಿಕಾರಿಗಳು ಮಲತಾಯಿ ಧೋರಣೆ ಮಾಡುತ್ತಿದ್ದಾರೆಂದು ನಮ್ಮ ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕ ಅಧ್ಯಕ್ಷ ತಿಮ್ಮರೆಡ್ಡಿ ಮುನ್ನೂರು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದರು .

ಲಿಂಗಸಗೂರು ಬರಗಾಲ ತಾಲೂಕು



ಎಂದು ಘೋಷಣೆಯಾದರೂ ಕೂಡ ಅಂಕನಾಳ ಹಾಗೂ ಉಪನಾಳ ಗ್ರಾಮಕ್ಕೆ ಕಣ್ಣುತೆರೆದು ನೋಡದ ಎಇ ಗಳು ಹಾಗೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು. ಕೆಲವು ದಿನಗಳ ಹಿಂದೆ ಅಂದರೆ ದಿನಾಂಕ: 21–09–2026ರಂದು ಅಂಕನಾಳ ಹಾಗೂ ಉಪನಾಳ ಗ್ರಾಮದ ಸಾರ್ವಜನಿಕರು ತಾಲೂಕು ಪಂಚಾಯತ್ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದರು ಅಧಿಕಾರಿಗಳು ಮನವಿಯನ್ನು ಕಸದ ಪುಟ್ಟಿಗೆ ಹಾಕಿ ಗೊತ್ತಿದ್ದೂ ಗೊತ್ತಿಲ್ಲದಂತೆ ಕಣ್ಮುಚ್ಚಿ ಕುಳಿತಿದ್ದಾರೆ. ಅಂಕನಾಳ ಗ್ರಾಮಕ್ಕೆ ವಿಕಸಿತ ಭಾರತ–ರೋಜ್‌ಗಾರ್ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) ಅಥವಾ ವಿ ಬಿ ಜಿ ರಾಮ್ ಜಿ ಯೋಜನೆಯಡಿ ಗ್ರಾಮಸ್ಥರಿಗೆ ಕಾಮಗಾರಿ ನೀಡಬೇಕು ಹಾಗೂ ಕಾಮಗಾರಿಯಲ್ಲಿ ಮಲತಾಯಿ ದೋರಣೆ ಮಾಡುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ ಅಮಾನತು ಗೊಳಿಸಬೇಕು.

ಕೆಲವೇ ದಿನಗಳಲ್ಲಿ ವಿಕಸಿತ ಭಾರತ – ರೋಜ್ ಗಾರ್ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) ಅಥವಾ ವಿ ಬಿ ಜಿ ರಾಮ್ ಜಿ ಯೋಜನೆಯಡಿ ಅಂಕನಾಳ–ಉಪನಾಳ ಗ್ರಾಮಗಳಿಗೆ ಕಾಮಗಾರಿ ನೀಡದಿದ್ದರೆ ನಮ್ಮ ಕರ್ನಾಟಕ ರಕ್ಷಣಾ ವೇದಿಕೆ ಸಂಘಟನೆ ಹಾಗೂ ಅಂಕನಾಳ–ಉಪನಾಳ ಗ್ರಾಮದ ಸಾರ್ವಜನಿಕರು ತಾಲೂಕು ಪಂಚಾಯತ್ ಮುಂದೆ ಧರಣಿ ಹಮ್ಮಿಕೊಳ್ಳಲಾಗುತ್ತದೆಂದು ಒತ್ತಾಯಿಸಿದರು .

ಈ ಸಂದರ್ಭದಲ್ಲಿ ರಮೇಶ್ ಗುತ್ತೇದಾರ , ಅಶೋಕ್ ಗಸ್ತಿ , ಯಲ್ಲಪ್ಪ ಬಂಡಿ , ರವಿಕುಮಾರ್ ಗೋರೆಬಾಳ್ , ಲಕ್ಷ್ಮೀ ಅಂಕನಾಳ್ , ಅಮರಮ್ಮ ಅಂಗಡಿ , ಗದ್ದೆಮ್ಮ ತಳವಾರ್ , ರೆಡ್ಡೆಪ್ಪ , ರೇಣುಕಾ, ಲಕ್ಷ್ಮಿ ಮುರಾರಿ , ಸರಸಮ್ಮ , ಲಕ್ಷ್ಮಿಭಾಯಿ , ಶರಣಮ್ಮ ಕುರಿ ಸೇರಿದಂತೆ ಗ್ರಾಮಸ್ಥರು ಇದ್ದರು .

ಸಾಹಿತ್ಯ ಸಿಂಚನ

ಕಳೆದುಹೋದ ನಗುವಿನ ಹುಡುಕಾಟ

ಕನ್ನಡಿ ಮುಂದೆ ನಿಂತಾಗ ಇಂದು,
ಮುಖವಿದೆ? ಆದರೆ ನಗು ಕಾಣದು,
ಕಣ್ಣಿನಲ್ಲಿ ಸಾವಿರ ಮಾತಿದ್ದರೂ,
ಮನದ ನೋವು ಮಾತ್ರ ಹೊರಬರದು.

ಒಮ್ಮೆ ಸಣ್ಣ ಕ್ಷಣವೂ ಸಾಕಾಗಿತ್ತು,
ತುಟಿಗಳ ಮೇಲೆ ನಗು ಮೂಡಿಸಲು,
ಇಂದು ಸಾವಿರ ಕಾರಣಗಳಿದ್ದರೂ,
ಮನಸ್ಸು ಸಿದ್ಧವಿಲ್ಲ ನಗಲು.

ಹಳೆಯ ದಿನಗಳ ದಾರಿಯಲ್ಲಿ ನಡೆದು,
ಮರೆತ ಸಂತೋಷವ ಹುಡುಕುತ್ತೇನೆ,
ಬಾಲ್ಯದ ಆ ಮುಗ್ಧ ನಗುವನ್ನು,
ನೆನಪುಗಳ ನಡುವೆ ಕರೆಯುತ್ತೇನೆ.

ಕಳೆದುಹೋದ ಕ್ಷಣಗಳು ಹೇಳುತ್ತವೆ,
"ನಿನ್ನ ನಗು ಇನ್ನೂ ನಿನ್ನೊಳಗಿದೆ,"
ಮನದ ಬಾಗಿಲು ತೆರೆದು ನೋಡಿದರೆ,
ಅದು ಮೌನದ ಹಿಂದೆ ಅಡಗಿದೆ.

ಕಣ್ಣೀರಿನ ಹನಿಗಳ ನಡುವೆ ಕೂಡ,
ಒಂದು ಪುಟ್ಟ ಭರವಸೆ ಉಳಿದಿದೆ,
ಕತ್ತಲಾದ ಈ ಬದುಕಿನ ದಾರಿಯಲ್ಲಿ,
ಹೊಸ ನಗುವಿನ ಬೆಳಕು ಕಾದಿದೆ.

ನಿನ್ನೆ ಕಳೆದುಕೊಂಡ ನಗುವಿಗಾಗಿ,
ಇಂದು ಹುಡುಕಾಟ ಮುಂದುವರಿಯಲಿ,
ನಾಳೆಯ ಹೊಸ ಪ್ರಭಾತದೊಂದಿಗೆ,
ನನ್ನ ನಗು ಮತ್ತೆ ಅರಳಲಿ.

ಬೈಕ್ ಸಮೇತ ಎಲ್‌ಎಲ್‌ಸಿ ಕಾಲುವೆಗೆ ಬಿದ್ದ ಯುವಕ: ಮೃತದೇಹಕ್ಕಾಗಿ ತೀವ್ರ ಶೋಧ

❏ ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ಅತಿವೇಗವಾಗಿ ಬೈಕ್ ಚಲಾಯಿಸುವಾಗ ನಿಯಂತ್ರಣ ತಪ್ಪಿ ಯುವಕನೊಬ್ಬ ಬೈಕ್ ಸಮೇತ ಕಾಲುವೆಗೆ ಬಿದ್ದಿರುವ ದುರ್ಘಟನೆ ಇಲ್ಲಿಗೆ ದೇವಸಮುದ್ರ ಸಮೀಪದ ಎಲ್‌ಎಲ್‌ಸಿ (ಲೋ ಲೆವೆಲ್ ಕೆನಾಲ್) ಕಾಲುವೆ ಬಳಿ ನಡೆದಿದೆ. ಎಮ್ಮಿಗನೂರು ಗ್ರಾಮದ ರಾಜಾಸಾಬ್ (21) ಕಾಲುವೆ ಪಾಲಾದ ದುರ್ದೈವಿ ಎಂದು ಗುರುತಿಸಲಾಗಿದೆ. ಘಟನೆಯ ವಿವರ:



ಮೃತ ರಾಜಾಸಾಬ್ ಅತಿವೇಗವಾಗಿ ಬೈಕ್‌ನಲ್ಲಿ ಕಾಲುವೆ ರಸ್ತೆಯ ಸಮೀಪ ಬರುತ್ತಿದ್ದಾಗ, ಎದು-ರಿನಿಂದ ಎಮ್ಮೆಗಳು ಬಂದಿದೆ. ಈ ವೇಳೆ ನಿಯಂತ್ರಣ ತಪ್ಪಿ ಸಿಗದೆ ಯುವಕ ಮೋಟಾರ್ ಸೈಕಲ್ ಸಮೇತ ನೇರವಾಗಿ ಕಾಲುವೆಗೆ ಬಿದ್ದಿದ್ದಾನೆ ಎನ್ನಲಾಗಿದೆ. ವಿಷಯ ತಿಳಿಯುತ್ತಿದ್ದಂತೆ ಅಗ್ನಿಶಾಮಕ ದಳ ಹಾಗೂ ಕಂಪ್ಲಿ ಪೊಲೀಸರು ತಕ್ಷಣವೇ ಸ್ಥಳಕ್ಕೆ ಧಾವಿಸಿದ್ದು, ದೇವಸಮುದ್ರ ಕಾಲುವೆ ಬಳಿ ಯುವಕನ ಮೃತದೇಹಕ್ಕಾಗಿ ತೀವ್ರ ಶೋಧ ಕಾರ್ಯ ನಡೆಸಿದ್ದಾರೆ.

ಕರ್ನಾಟಕ ರಾಜ್ಯೋತ್ಸವ ದಿನದಿಂದ ಬೆಂಗಳೂರು–ಮುಂಬೈ ವಂದೇ ಭಾರತ್ ಸ್ಲೀಪರ್ ಎಕ್ಸ್‌ಪ್ರೆಸ್ ಸಂಚಾರ ಆರಂಭ

❏ ನೈಜ್ಯ ದೆಸೆ ನ್ಯೂಸ್

ನವೆಂಬರ್ 1, 2026 – ಬಾಬು ರಾವ್, ಮಾಜಿ ಸದಸ್ಯರು, ದಕ್ಷಿಣ ಮಧ್ಯ ರೈಲ್ವೆ. ವಂದೇ ಭಾರತ್ ಸ್ಲೀಪರ್ ರೈಲಿನ ಧ್ವಜಾರೋಹಣ ಸಮಾರಂಭವು ನವೆಂಬರ್ 1, 2026 ರಂದು ಬೆಳಿಗ್ಗೆ 11:30 ಕ್ಕೆ ಬೆಂಗಳೂರಿನ ಖಒಗಿಖ ನಿಲ್ದಾಣದಿಂದ ಗೌರವಾನ್ವಿತ ರೈಲ್ವೆ ಸಚಿವರಾದ ಶ್ರೀ ಅಶ್ವಿನಿ ವೈಷ್ಣವ್ ಮತ್ತು ವಿ. ಸೋಮಣ್ಣ ಅವರಿಂದ ನಡೆಯಲಿದೆ. ಏಕಕಾಲದಲ್ಲಿ ಇದೇ ರೈಲಿಗೆ ಮುಂಬೈನಿಂದಲೂ ಚಾಲನೆ ನೀಡಲಾಗುವುದು.



ಉದ್ಘಾಟನಾ ಸಮಾರಂಭ ನವೆಂಬರ್ 1 ರಂದು ರಾಯಚೂ-ರಿನಲ್ಲಿ ಸಂಜೆ 5 ಗಂಟೆಗೆ, ಯಾದಗಿ-ರಿಯಲ್ಲಿ ಸಂಜೆ 6 ಗಂಟೆಗೆ. ಪ್ರಸ್ತಾವಿತ ಪ್ರಯಾಣದ ಅವಧಿ ಸುಮಾರು 16 ಗಂಟೆಗಳು, ಇದು ಅಸ್ತಿತ್ವದಲ್ಲಿರುವ ಉದ್ಯಾನ ಎಕ್ಸ್‌ಪ್ರೆಸ್‌ನ 24 ಗಂಟೆಗಳ ಪ್ರಯಾಣ-ಕ್ಕೆ ಹೋಲಿಸಿದರೆ ಕಡಿಮೆಯಾಗಿದೆ ಎಂದು ಅವರು ಹೇಳಿದರು. ನಿಲುಗಡೆಗಳು: ಧರ್ಮಾವರಂ, ಅನಂತಪುರ, ಗುಂತಕಲ್, ರಾಯಚೂರು, ಯಾದಗಿರಿ, ವಾಡಿ, ಕಲಬುರಗಿ, ಸೊಲ್ಲಾಪುರ, ಪುಣೆ.

ಸಿಂಧನೂರಿನ ಕಲೀಲ್ ಅವರಿಗೆ ಪಿಎಚ್.ಡಿ ಪದವಿ ಪ್ರದಾನ

ವಾಣಿಜ್ಯ ಶಾಸ್ತ್ರದಲ್ಲಿ ಸಂಶೋಧನೆ; ಕಂಪ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರಿಗೆ ಡಾಕ್ಟರೇಟ್ ಗೌರವ

❏ ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಬಳ್ಳಾರಿ ಜಿಲ್ಲೆಯ ಕಂಪ್ಲಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಸಿಂಧನೂರು ಮೂಲದ ಶ್ರೀ ಕಲೀಲ್ ಅವ-ರಿಗೆ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿಯನ್ನು ಪ್ರಕಟಿಸಿದೆ. ವಾಣಿಜ್ಯ ಅಧ್ಯಯನ ಕ್ಷೇತ್ರದಲ್ಲಿ ಸಂಶೋಧನೆ ನಡೆಸಿ ಡಾಕ್ಟರೇಟ್ ಪದವಿಗೆ ಭಾಜನರಾಗಿರುವುದು ಅವರ ಶೈಕ್ಷಣಿಕ ಸಾಧನೆಗೆ ಮತ್ತೊಂದು ಗರಿ ಮೂಡಿಸಿದಂತಾಗಿದೆ.

ಶ್ರೀ ಕಲೀಲ್ ಅವರು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ವಾಣಿಜ್ಯ ಅಧ್ಯಯನ ನಿಕಾಯದ ಪ್ರಾಧ್ಯಾಪಕರಾದ ಸಿಎಮ್‌ಎ ಡಾ. ಜೀಲಾನ್ ಬಾಷಾ. ವಿ ಅವರ ಮಾರ್ಗದರ್ಶನದಲ್ಲಿ "ಎ ಸ್ಟಡಿ ಆನ್ ಸ್ಟಾಕ್ ಡಿರೈವೇಟಿವ್ ಇನ್‌ಸ್ಟ್ರುಮೆಂಟ್ಸ್ ವಿಥ್ ಸ್ಪೆಷಲ್ ರೆಫರೆನ್ಸ್ ಟು ಐಟಿ ಇಂಡಸ್ಟ್ರಿ ಇನ್ ಇಂಡಿಯಾ" ಎಂಬ ವಿಷಯದ ಕುರಿತು ಮಹಾಪ್ರಬಂಧವನ್ನು ಸಿದ್ಧಪಡಿಸಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದರು. ಭಾರತದಲ್ಲಿನ ಮಾಹಿತಿ ತಂತ್ರಜ್ಞಾನ (ಐಟಿ) ಉದ್ಯಮವನ್ನು ವಿಶೇಷವಾಗಿ ಪರಿಗಣಿಸಿ,



ಷೇರು ಮಾರುಕಟ್ಟೆಯ ಡೆರಿವೇಟಿವ್ ಹಣ-ಕಾಸು ಸಾಧನಗಳ ಕುರಿತು ಅವರು ನಡೆಸಿದ ಸಂಶೋಧನೆಗೆ ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿಯನ್ನು ನೀಡಿದೆ.

ಪ್ರಸ್ತುತ ಕಂಪ್ಲಿಯ ಸರ್ಕಾರಿ ಪ್ರಥ-ಮ ದರ್ಜೆ ಕಾಲೇಜಿನಲ್ಲಿ ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ಕಲೀಲ್ ಅವರು ಬೋಧನೆ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಉನ್ನತ ಶಿಕ್ಷಣದ ಜೊತೆಗೆ ಸಂಶೋಧನಾ ಚಟುವಟಿಕೆಗಳಲ್ಲಿ ಆಸಕ್ತಿ ವಹಿಸಿ, ಆಯ್ದ



VIJAYANAGARA SRI KRISHNADEVARAYA UNIVERSITY, BALLARI, KARNATAKA

NOTIFICATION

DECLARATION OF RESULT OF DOCTOR OF PHILOSOPHY

Sri. Kaleel

PHD21MCM26 / 20.01.2021

Department of Studies in Commerce

"A Study on Stock Derivative Instruments with Special Reference to IT Industry in India"

Faculty of Business Studies

CMA. Dr. Jeelan Basha V

Professor,

Department of Studies in Commerce,

Vijayanagara Sri Krishnadevaraya University, Ballari.

Registrar (Evaluation)

Vijayanagara Sri Krishnadevaraya University, Ballari

ವಿಷಯದ ಕುರಿತು ಆಳವಾದ ಅಧ್ಯಯನ ನಡೆಸಿ ಮಹಾಪ್ರಬಂಧವನ್ನು ಮಂಡಿಸಿರುವುದು ಅವರ ಪರಿಶ್ರಮ, ಬದ್ಧತೆ ಹಾಗೂ ಶೈಕ್ಷಣಿಕ ಆಸಕ್ತಿಯನ್ನು ಪ್ರತಿಬಿಂಬಿಸುತ್ತದೆ.

ಇಂದಿನ ಸ್ಪರ್ಧಾತ್ಮಕ ಆರ್ಥಿಕ ವ್ಯವಸ್ಥೆಯಲ್ಲಿ ಷೇರು ಮಾರುಕಟ್ಟೆ, ಹಣಕಾಸು ಸಾಧನಗಳು ಹಾಗೂ ಮಾಹಿತಿ ತಂತ್ರಜ್ಞಾನ ಉದ್ಯಮವು ಮಹತ್ವದ ಪಾತ್ರ ವಹಿಸುತ್ತಿವೆ. ಇಂತಹ ವಿಷಯವನ್ನು ಸಂಶೋಧನೆಗಾಗಿ ಆಯ್ಕೆ ಮಾಡಿಕೊಂಡು, ಅದರ ವಿವಿಧ ಆಯಾಮಗಳನ್ನು ಅಧ್ಯಯನ ಮಾಡಿರುವುದು ವಾಣಿಜ್ಯ ಅಧ್ಯಯನ ಕ್ಷೇತ್ರದಲ್ಲಿ ಅವರ ಆಸಕ್ತಿಯನ್ನು ತೋ-ರಿಸುತ್ತದೆ. ಉನ್ನತ ಶಿಕ್ಷಣದಲ್ಲಿ ಸಂಶೋಧನೆಯ ಮಹತ್ವ ಹೆಚ್ಚುತ್ತಿರುವ ಸಂದರ್ಭದಲ್ಲಿ ಇಂತಹ ಸಾಧನೆಗಳು ಇತರ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿವೆ.

ಶ್ರೀ ಕಲೀಲ್ ಅವರ ಈ ಶೈಕ್ಷಣಿಕ ಸಾಧನೆಗೆ ಕಾಲೇಜಿನ ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ಅವರಿಗೆ ವಿದ್ಯಾಭ್ಯಾಸ ಕಲಿಸಿದ ಗುರುಗಳು, ವಿದ್ಯಾರ್ಥಿಗಳು, ಕುಟುಂಬಸ್ಥರು ಹಾಗೂ ಸ್ನೇಹಿತರು ಹರ್ಷ ವ್ಯಕ್ತಪಡಿಸಿ ಅಭಿನಂದನೆ ಸಲ್ಲಿಸಿದ್ದಾರೆ. ಅವರ ಮುಂದಿನ ಶೈಕ್ಷಣಿಕ ಮತ್ತು ವೃತ್ತಿಜೀವನವು ಇನ್ನಷ್ಟು ಯಶಸ್ಸಿನಿಂದ ಕೂಡಿರಲಿ ಎಂದು ಶುಭ ಹಾರೈಸಿದ್ದಾರೆ.

ಸಿಂಧನೂರು ಮೂಲದ ವ್ಯಕ್ತಿಯೊಬ್ಬರು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಕ್ಷೇತ್ರದಲ್ಲಿ ಮಹತ್ವದ ಸಾಧನೆ ಮಾಡಿರುವುದು ಸ್ಥಳೀಯರಿಗೂ ಹೆಮ್ಮೆಯ ಸಂಗತಿಯಾಗಿದ್ದು, ಶ್ರೀ ಕಲೀಲ್ ಅವರ ಈ ಸಾಧನೆಗೆ ವಿವಿಧ ವಲಯಗಳಿಂದ ಅಭಿನಂದನೆಗಳು ವ್ಯಕ್ತವಾಗಿವೆ.

ಸಕ್ರೀಯ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸಾ ಆಂದೋಲನ

ಎರಡು ವಾರಗಳಿಗಿಂತ ಹೆಚ್ಚು ದಿನಗಳ ಗುಣಮುಖವಾಗದ ಕೆಮ್ಮು, ನಿರ್ಲಕ್ಷ್ಯ ವಹಿಸಬೇಡಿ:ಡಾ ನಂದಿತಾ ಎಮ್ ಎನ್.

❏ ನೈಜ್ಯ ದೆಸೆ ನ್ಯೂಸ್

ರಾಯಚೂರು: ಸಮುದಾಯದ ನಡುವೆ ಇಂದಿಗೂ ಇರುವ ಕ್ಷಯರೋಗವನ್ನು ನಿರ್ಮೂಲನೆ ಮಾಡಲು, ವಾರಗಳಿಗಿಂತ ಹೆಚ್ಚು ಕಾಲ ನಿರಂತರ ಕೆಮ್ಮು ಇದ್ದಲ್ಲಿ ನಿರ್ಲಕ್ಷ್ಯ ವಹಿಸದೆ ಒಮ್ಮೆ ಕಫ ಮಾಡಿಸಿ ಖಚಿತಪಟ್ಟಲ್ಲಿ 06 ತಿಂಗಳುಗಳ ಉಚಿತ ಚಿಕಿತ್ಸೆಯನ್ನು ಪಡೆದು ಸಂಪೂರ್ಣ ಗಯಣಮುಖರಾಗಲು ಸಾಧ್ಯವಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ತಿಳಿಸಿದರು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಘಟಕ, ತಾಲೂಕಾ ಆರೋಗ್ಯಾಧಿಕಾರಿಗಳ ಕಾರ್ಯಾಲಯ, ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಸಿಯಾ ತಲಾಬ್,ರಾಯಚೂರು ರವರ ಆಶ್ರಯದಲ್ಲಿ ಹಮ್ಮಿಕೊಂಡ ಸಕ್ರೀಯ ಕ್ಷಯರೋಗ ಪತ್ತೆ ಮತ್ತು ಚಿಕಿತ್ಸಾ ಆಂದೋಲನದಡಿ ದಿ 27-10-26 ರಿಂದ 8-12-26 ರವರೆಗೆ ಮನೆ ಮನೆಗೆ ಕ್ಷೇತ್ರ ಮಟ್ಟದ ವೈದ್ಯಕೀಯ ಸಿಬ್ಬಂದಿಯವರ ತಂಡಗಳು ಬೇಟಿ ನೀಡಿ ಕ್ಷಯರೋಗ ಪತ್ತೆ ಹಚ್ಚುವ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡುತ್ತಾ, ಕಫದಲ್ಲಿ ಕ್ಷಯದ ಸೋಂಕು ಕಂಡು ಬಂದಲ್ಲಿ, ಸೊಂಕೀತರು ಚಿಕಿತ್ಸೆ ಪಡೆಯದಿದ್ದರೆ,



ಸಿನುವುದರಿಂದ, ಕೆಮ್ಮುವುದರಿಂದ ತಮ್ಮ ಹತ್ತಿರದ ಒಡನಾಡಿಗಳನ್ನು, ಕುಟುಂಬದ ಸದಸ್ಯರನ್ನು ಕ್ಷಯರೋಗಿಗಳನ್ನಾಗಿಸುವ ಅಪಾಯ ಇರುವುದರಿಂದ ರೋಗ ಖಚಿತಪಟ್ಟಲ್ಲಿ ತಪ್ಪದೆ ಚಿಕಿತ್ಸೆ ಪಡೆಯಲು ವ್ಯಾಪಕವಾಗಿ ಜಾಗೃತಿ ನೀಡಲು ತಿಳಿಸಿದರು. ಯಾವ ಲಕ್ಷಣಗಳಿದ್ದರೆ ಪರೀಕ್ಷೆ ಮಾಡಿಸಬೇಕು. ರಕ್ತ ಮಿಶ್ರಿತ ಕಫ ಅಥವಾ, ಜ್ವರ, ವಿಶೇಷವಾಗಿ ಸಂಜೆ ವೇಳೆಯಲ್ಲಿ ಜ್ವರ, ರಾತ್ರಿ ವೇಳೆ ಅಧಿಕ ಬೆವರುವುದು. ಕಾರಣವಿಲ್ಲದೆ ತೂಕ ಕಡಿಮೆಯಾಗುವುದು. ಹಸಿವಿನ ಕೊರತೆ. ಆಯಾಸ ಅಥವಾ ದೌರ್ಬಲ್ಯ. ಎದೆ ನೋವು. ಇರುವವರು ತಪ್ಪದೆ ಕ್ಷಯರೋಗ ಪರೀಕ್ಷೆ ಮಾಡಿಸಬೇಕು ಎಂದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ ಯಶೋಧಾ ಮಾತನಾಡಿ ಮುಖ್ಯವಾಗಿ ಕ್ಷಯರೋಗದ ಪತಗತೆಗಾಗಿ ಪರೀಕ್ಷೆ ಮಾಡಿಸುವುದು ಅತ್ಯಗತ್ಯವಾಗಿದ್ದು, ಅದರಲ್ಲೂ ಈ ಗುಂಪಿನಲ್ಲಿ ಬರುವವರು ತಪ್ಪದೆ ಪರೀಕ್ಷೆ ಮಾಡಿಸಲು ತಿಳಿಸಿದರು.

ಕ್ಷಯರೋಗಿಗಳ ಮನೆಯ ಸದಸ್ಯರು ಮತ್ತು ನಿಕಟ ಸಂಪರ್ಕದಲ್ಲಿರುವವರು, ಹೆಚ್‌ಐವಿ ಸೋಂಕಿತರು. ಮಧುಮೇಹ ಇರುವವರು. ಧೂಮಪಾನಿಗಳು ಹಾಗೂ ತಂಬಾಕು ಸೇವಿಸುವವರು. ಅಪೌಷ್ಟಿಕತೆ ಹೊಂದಿರುವವರು ಅಥವಾ ಕಡಿಮೆ ತೂಕದವರು. ರೋಗನಿರೋಧಕ ಶಕ್ತಿ ಕಡಿಮೆಯಿರುವವರು (ಕ್ಯಾನ್ಸರ್ ರೋಗಿಗಳು, ಅಂಗಾಂಗ ಕಸಿ ಪಡೆದವರು, ದೀರ್ಘಕಾಲ ಸ್ಟೀರಾಯ್ಡ್ ಬಳಸುವವರು). ವಯೋವೃದ್ಧರು. 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು. ಜೈಲುಗಳು, ಆಶ್ರಮ ಕೇಂದ್ರಗಳು ಮತ್ತು ಜನದಟ್ಟಣೆಯ ಪ್ರದೇಶಗಳಲ್ಲಿ ವಾಸಿಸುವವರು. ಕ್ಷಯರೋಗಿಗಳ ಸಂಪರ್ಕಕ್ಕೆ ಬರುವ ಆರೋಗ್ಯ ಸಿಬ್ಬಂದಿ. ಡಯಾಲಿಸಿಸ್ ಮಾಡಿಸಿಕೊಳ್ಳುವ (ಕಿಡ್ನಿ) ರೋಗಿಗಳು. ಸಿಲಿಕೋಸಿಸ್ ಅಥ-ವಾ ಧೂಳುಪೂರಿತ ಉದ್ಯೋಗಗಳಲ್ಲಿ ಕೆಲಸ ಮಾಡುವವರು. ತಪ್ಪದೆ ಸ್ವಯಂ ಪರೀಕ್ಷೆಗೆ ಒಳಪಡುವ ಅಗತ್ಯತೆ ಬಗ್ಗೆ ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕಾ ಆರೋಗ್ಯಾಧಿಕಾರಿ ಡಾ ಸತೀಶ್, ವೈದ್ಯಾಧಿಕಾರಿ ಗುಂಡಮ್ಮ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಜಿಲ್ಲಾ ಆರೋಗ್ಯ ಮೇಲ್ವಿಚಾರಕ ಪುಂಡಲೀಕ ಗಂಜಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಸರೋಜಾ ಕೆ, ಡಿಪಿಸಿ ಅಮರೇಶ್ ಕುಮಾರ್, ಪಿಪಿಎಂ ಮೋಹಿನ್ ಪಾಷಾ, ಡಿಪಿಎಸ್ ಪ್ರವೀಣಕುಮಾರ್, ಎಸ್‌ಟಿಎಸ್ ಅಮೀರ್, ಟಿಬಿಎಚ್‌ಪಿ ಯುಸುಪ್‌ಉದ್ದೀನ್, ಪ್ರದೀಪ್ ಕುಮಾರ್, ಎಸಟಿಎಲ್‌ಎಸ್ ಅಬ್ದುಲ್ ನಬಿಸಾಬ್, ಫಾರ್ಮಸಿ ಅಧಿಕಾರಿ ಸೋಮಶೇಖರ್, ಎಲ್‌ಟಿಓ ರಮೇಶ್ ಎಂಟಿಎಸ್ ಸಂಧ್ಯಾ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿ ಅನಿತಾ, ಮೈನು ಬೇಗಮ್. ರೇಣುಕಾ, ರೇಣುಕಾ ಡಿ, ಸುನೀತಾ, ಆರೋಗ್ಯ ನಿರೀಕ್ಷಣಾಧಿಕಾರಿ ನಿಶಾಂತ್, ಬಸವರಾಜ ಹಾಗೂ ಆಶಾ ಕಾರ್ಯಕರ್ತೆಯರು ಸೇ-ರಿದಂತೆ ತಾಯಂದಿರು ಭಾಗವಹಿಸಿದ್ದರು.

ನ. 1ರಂದು ಕುಷ್ಟಗಿಯಲ್ಲಿ ಅದ್ದೂರಿ ಕನ್ನಡ ರಾಜ್ಯೋತ್ಸವ ಆಚರಣೆ

❏ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಪಟ್ಟಣದ ತಹಸೀಲ್ದಾರ್ ಕಚೇ-ರಿಯಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಪೂರ್ವಭಾವಿ ಸಭೆ ಮಂಗಳವಾರ ಜರುಗಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ತಹಸೀಲ್ದಾರ್ ಅಶೋಕ ಶಿಗ್ಗಾವಿ ಮಾತನಾಡಿ, ಪ್ರತಿ ವರ್ಷದಂತೆ ಈ ಬಾರಿಯೂ ನವೆಂಬರ್ 1ರಂದು ತಾಲೂಕು ಆಡಳಿತದ ವತಿಯಿಂದ ಕನ್ನಡ ರಾಜ್ಯೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುವುದು ಎಂದು ತಿಳಿಸಿದರು.

ಪಟ್ಟಣದ ಕಾರ್ಗಿಲ್ ವೀರಯೋಧ ದಿವಂಗತ ಮಲ್ಲಯ್ಯ ವೃತ್ತದಿಂದ ಕನ್ನಡಾಂಬೆಯ ಭಾವಚಿತ್ರದೊಂದಿಗೆ ಸಕಲ ಮಂಗಳವಾದ್ಯಗಳ ಸಹಿತ ಮೆರವಣಿಗೆ ನಡೆಯಲಿದೆ. ಮೆರವಣಿಗೆಯು ತಾಲೂಕು ಕ್ರೀಡಾಂಗಣ ತಲುಪಿದ ಬಳಿಕ ಕನ್ನಡ ರಾಜ್ಯೋತ್ಸವದ ಮುಖ್ಯ ಸಮಾರಂಭ ಜರುಗಲಿದೆ ಎಂದರು.

ಕನ್ನಡ ನಾಡು, ನುಡಿ ಹಾಗೂ ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸಿದ ಮಹನೀಯರು, ಕನ್ನಡಾಭಿಮಾನಿಗಳು, ಸಾಹಿತಿಗಳು, ಸಾಂಸ್ಕೃತಿಕ ಕಲಾವಿದರು ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪ್ರತಿಭಾವಂತರನ್ನು ಗುರುತಿಸಿ ಗೌರವಿಸಲಾಗುವುದು. ಸಭೆಯಲ್ಲಿ ಪಾಲ್ಗೊಂಡವರ ಸಲಹೆ-ಸೂಚನೆಗಳನ್ನು ಪರಿಗಣಿಸಿ ಎಲ್ಲರ ಸಹಕಾರದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗುವುದು ಎಂದು ಹೇಳಿದರು. ಕನ್ನಡ ರಾಜ್ಯೋತ್ಸವದಲ್ಲಿ ವಿವಿಧ ಇಲಾಖೆಗಳ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ಕಡ್ಡಾಯವಾಗಿ ಭಾಗವಹಿಸಬೇಕು. ಗೈರುಹಾಜರಾಗುವ ಸಿಬ್ಬಂದಿಗೆ ನೋಟಿಸ್ ನೀಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲೆಂಕಪ್ಪ ವಾಲಿಕಾರ, ಬಸವರಾಜ ಗಾಣಿಗೇರ, ಶರಣು ತೆಗ್ಗಿಹಾಳ ಹಾಗೂ ರವೀಂದ್ರ ಬಾಕಳೆ ಮಾತನಾಡಿ, ಕನ್ನಡ ರಾಜ್ಯೋತ್ಸವವನ್ನು



ಅರ್ಥಪೂರ್ಣವಾಗಿ ಆಚರಿಸುವ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಸಭೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಉಮಾದೇವಿ ಬಸಾಪುರ, ಪುರಸಭೆ ಮುಖ್ಯಾಧಿಕಾರಿ ವಿ.ಐ. ಬಿಳಗಿ, ದಿವಂಗತ ದೇವರಾಜ ಅರಸು ಇಲಾಖೆಯ ಅಧಿಕಾರಿ ಬಸವರಾಜ ನೆಲಗಣಿ, ತಾಲೂಕು ಪಂಚಾಯಿತಿ ವ್ಯವಸ್ಥಾಪಕ ಶಾಂತವೀರಯ್ಯ, ಹುಲ್ಲಪ್ಪ ಗಾಂಜಿ, ಸಾಹಿತಿ ಹನಮೇಶ ಗುಮಗೇರಿ, ನಬಿಸಾಬ ಕುಷ್ಟಗಿ, ಮುತ್ತಣ್ಣ ಬಾಚಲಾಪುರ, ಚನ್ನಪ್ಪ ನಾಲಗಾರ, ಸಂತೋಷ ತೋಟದ, ಬುಡ್ನೆಸಾಬ ಕಲಾದಗಿ, ಮಾರುತಿ ಹಲಗಿ, ಹುಸೇನಪ್ಪ ಮುದೇನೂರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಕನ್ನಡಪರ ಹೋರಾಟಗಾರರು ಹಾಗೂ ಗಣ್ಯರು ಉಪಸ್ಥಿತರಿದ್ದರು.

ದೇಶಕ್ಕೆ ಸ್ವಾತಂತ್ರ್ಯ ಬಂದು 80 ವರ್ಷ ಗತಿಸಿದರು ಲಿಂಗಸಗೂರು ತಾಲೂಕಿನಲ್ಲಿ ಇನ್ನು ಅಸ್ಪೃಶ್ಯತೆ ಜೀವಂತ

❏ ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ತಾಲೂಕಿನ ಕಾಳಾಪೂರ ಗ್ರಾಮ ಪಂಚಾಯಿತಿ ಎದುರಿನ ಹೋಟೆಲ್ ನಲ್ಲಿ ನಡೆದಿರುವ ಅಮಾನವೀಯ ಘಟನೆ ಕಾಳಾಪೂರದ ನಿವಾಸಿ ಚಿದಾನಂದ (ದಲಿತ ಸಮುದಾಯ) ಅವರು ಹೋಟೆಲ್ ನಲ್ಲಿ ನಾಷ್ಟಾ ಮಾಡಿ ನೀರು ಕೇಳಿದ್ದಾರೆ.

ಆಗ ಹೋಟೆಲ್ ಮಾಲೀಕ ವೀರಭದ್ರಪ್ಪ ಗೌಡ ಅವರು ಅವರ ಕೈಗೆ ನೀರಿನ ಲೋಟ ಕೊಡದೆ, ಸುಮಾರು 3 ಅಡಿ ಎತ್ತರದಿಂದ ನೀರನ್ನು ಅವರ ಅಂಗೈಗೆ ಎತ್ತಿ ಹಾಕಿದ್ದಾರೆ. ಸಂತ್ರಸ್ತರು ಬಗ್ಗಿ, ಕೈ ಒಡ್ಡಿ ನೀರು ಕುಡಿಯುವಂತೆ ಮಾಡಲಾಗಿದೆ. ಇದು ವಿಡಿಯೋದಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಇದು ಎರಡು ನೋಟ ಪದ್ಧತಿ ಮತ್ತು ಅಸ್ಪೃಶ್ಯತೆಯ ಪರಮಾವಧಿ ಅಸ್ಪೃಶ್ಯತೆ ಆಚರಿಸಿದ ವೀರಭದ್ರಪ್ಪ ಗೌಡ ವಿರುದ್ಧ ಸ್ವಯಂ ಪ್ರೇರಿತವಾಗಿ ಸುಮಟೋ ಕೇಸ್ ದಾಖಳಿಸಿ ಕೊಳ್ಳಬೇಕೆಂದು ಅಂಬೇಡ್ಕರ್ ಸೇನೆಯ ತಾಲೂಕ ಅಧ್ಯಕ್ಷ ಗದ್ದೆಪ್ಪ ಚಿತ್ತಾಪುರ ಡಿ ವೈ ಎಸ್ ಪಿ ಸುಲೈಮಾನ್ ತಹಸೀಲ್ದಾರ್ ರವರಿಗೆ ಮನವಿಯನ್ನು ಸಲ್ಲಿಸಿದರು .

ಇದು ಯಾವ ಕಾನೂನಿನಡಿ ಅಪರಾಧ ಈ ಕೃತ್ಯವು ಈ ಕೆಳಗಿನ ಕಾಯ್ದೆಗಳಡಿ ಗಂಭೀರ ಅಪರಾಧವಾಗಿದ್ದು, ಪೊಲೀಸ್ ಇಲಾಖೆ ದೂರು ಬರುವವರೆಗೆ ಕಾಯದೆ ಸ್ವಯಂ ಪ್ರೇ-ರಿತವಾಗಿ ಸುಮಟೋ ಕೇಸ್ ದಾಖಲಿಸಬೇಕು.

1.ಭಾರತ ಸಂವಿಧಾನ ಕಲಂ 17:ಅಸ್ಪೃಶ್ಯತೆ ಆಚರಣೆ ರದ್ದು – ಇದರ ಉಲ್ಲಂಘನೆ.

2. SC/ST (ದೌರ್ಜನ್ಯ ತಡೆ) ಕಾಯ್ದೆ 1989 (ತಿದ್ದುಪಡಿ 2015) :



ಕಲಂ 3(1)(ದಚಿ)(A) : ಪರಿಶಿಷ್ಟ ಜಾತಿಯ ವ್ಯಕ್ತಿಯನ್ನು ಸಾರ್ವಜನಿಕ ಸ್ಥಳದಲ್ಲಿ ಅವಮಾನಿಸುವುದು, ಅಸ್ಪೃಶ್ಯತೆ ಆಚರಿಸುವುದು. ಕಲಂ 3(1)(ದಛಿ): ಸಾರ್ವಜನಿಕವಾಗಿ ಬಳಕೆಯಾಗುವ ಕುಡಿಯುವ ನೀರಿನ ಮೂಲದಲ್ಲಿ ತಾರತಮ್ಯ ಮಾಡುವುದು.

3. ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ 1955, ಕಲಂ 3 & 4: ಅಸ್ಪೃಶ್ಯತೆ ಆಧಾರದ ಮೇಲೆ ನೀರು ಕೊಡಲು ನಿರಾಕರಿಸುವುದು.

4. ಭಾರತೀಯ ನ್ಯಾಯ ಸಂಹಿತಾ (BNS) 2023, ಕಲಂ 196: ಜಾತಿ ಆಧಾರದ ಮೇಲೆ ದ್ವೇಷ ಹರಡುವುದು.

ಸಾಕ್ಷಿ: ಘಟನೆಯ 24 ಸೆಕೆಂಡ್ ವಿಡಿಯೋ ಲಗತ್ತಿಸಲಾಗಿದೆ. ಇದು ಪ್ರಬಲ ಸಾಕ್ಷ್ಯ.

ನಮ್ಮಬೇಡಿಕೆ:- 1. ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಿ, ಯಾವುದೇ ದೂರುದಾರನ ಕಾಯದೆ ಸ್ವಯಂಪ್ರೇರಿತವಾಗಿ ಸುಮಟೋ ಕೇಸ್ ದಾಖಲಿಸಬೇಕು.

2. ಆರೋಪಿ ವೀರಭದ್ರಪ್ಪ ಗೌಡ ಅವರ ಹೋಟೆಲ್ ಟ್ರೇಡ್ ಲೈಸೆನ್ಸ್ ರದ್ದು ಮಾಡಲು ಗ್ರಾಮ ಪಂಚಾಯತಿಗೆ ಶಿಫಾರಸು ಮಾಡಬೇಕು.

3. ಸಂತ್ರಸ್ತ ಚಿದಾನಂದ ಅವರಿಗೆ SC/ST ಕಾಯ್ದೆ ನಿಯಮ 12(4) ರಂತೆ ತಕ್ಷಣದ ಪರಿಹಾರ ರೂ. 1,00,000 ಕೊಡಿಸಬೇಕು.

ದೂರು ಬಂದ ನಂತರವೇ ಎಫ್ ಐ ಆರ್ ಮಾಡುತ್ತೇವೆ ಎನ್ನುವುದು ಖಅ/ಖಖ ಕಾಯ್ದೆಯ ಉದ್ದೇಶಕ್ಕೆ ವಿರುದ್ಧ. ಮಾನ್ಯ ಸುಪ್ರೀಂ ಕೋರ್ಟ್ ಖಣಚಿಣಜ ರಜಿ ಒ.ಕ. ತಿ ಖುಧಿಚಿಟ ಖಣಾಟಿ-ಜಜಡಿ ಖಿಡುತಜಜು ಪ್ರಕರಣದಲ್ಲಿ ಹೇಳಿದಂತೆ, ಅಸ್ಪೃಶ್ಯತೆಯಂತಹ ವಿಡಿಯೋ ಸಾಕ್ಷಿ ಇದ್ದಾಗ ಪೊಲೀಸರು ತಾವೇ ಪ್ರಕರಣ ದಾಖಲಿಸಬೇಕು. ದಯವಿಟ್ಟು 24 ಗಂಟೆಯೊಳಗೆ ಎಫ್ ಐ ಆರ್ ದಾಖಲಿಸಿ ನ್ಯಾಯ ಒದಗಿಸಬೇಕೆಂದರು . ಈ ಸಂದರ್ಭದಲ್ಲಿ ಅಮರೇಶ್ ಹೆಚ್ ಆನೆಹೊಸೂರು ತಾಲೂಕು ಪ್ರಧಾನ ಕಾರ್ಯದರ್ಶಿ, ಅಂಬೇಡ್ಕರ್ ಸೇನೆ, ಆದೇಶ , ಭೀಮಣ್ಣ ಸೇರಿದಂತೆ ಇತರರು ಇದ್ದರು .

ನೇಮಕಾತಿ ಪ್ರಕಟಣೆ

KEA ನೇಮಕಾತಿ 2026 – 4699 ತಾಂತ್ರಿಕ ಮತ್ತು ತಾಂತ್ರಿಕೇತರ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸೆಪ್ಟೆಂಬರ್ 29, 2026

KEA ನೇಮಕಾತಿ 2026: 4699 FDA, SDA, ತಾಂತ್ರಿಕ, ತಾಂತ್ರಿಕೇತರ ಮತ್ತು 'ಗ್ರೂಪ್ ಸಿ' (Group C) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA), ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಈಅಂ, ಖಅಂ, ತಾಂತ್ರಿಕ, ತಾಂತ್ರಿಕೇತರ ಹಾಗೂ 'ಗ್ರೂಪ್ ಸಿ' ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ (ಸೆಪ್ಟೆಂಬರ್ 2026ರ ಏಇಂ ಅಧಿಕೃತ ಅಧಿಸೂಚನೆಯ ಮೂಲಕ). ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಹುಡುಕುತ್ತಿರುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಅರ್ಜಿ ಪ್ರಕ್ರಿಯೆ ಪ್ರಾರಂಭವಾದ ನಂತರ ಆಸಕ್ತ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ಅಧಿಸೂಚನೆ ಬಿಡುಗಡೆಯಾದ ಬಳಿಕ, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು ತಿಳಿಸಲಾಗುವುದು. ಅಧಿಕೃತ ವೆಬ್‌ಸೈಟ್: cetonline.karnataka.gov.in

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಸ್ಟಿಂಗ್ ಆಪರೇಷನ್ ಯಾರು ಮಾಡಿದ್ದಾರೆ ಅವರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಸಂಸದ ಸುನಿಲ್ ಬೋಸ್

ನೈಜ್ಯ ದೆಸೆ ನ್ಯೂಸ್

ತಾಂಡವಪುರ: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನ ವಿರುದ್ಧ ಸ್ಟಿಂಗ್ ಆಪರೇಷನ್ ವಿಚಾರ ಇಡೀ ರಾಜ್ಯದಲ್ಲಿ ಬಹು ದೊಡ್ಡ ಸುದ್ದಿಯಾಗಿ ಹರಿದಾಡುತ್ತಿದ್ದು ಯಾರು ಈ ಸ್ಟಿಂಗ್ ಆಪರೇಷನ್ ಮೂಲ ರೂವಾರಿ ಸೂತ್ರಧಾರಿ ಯಾರು ಎಂದು ಪತ್ತೆ ಹಚ್ಚುವಂತೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು



ಈಗಾಗಲೇ ಪೊಲೀಸರಿಗೆ ದೂರ ನೀಡಲಾಗಿದ್ದು ದೂರಿನ ಅನ್ವಯ ಈಗಾಗಲೇ ತನಿಕೆ ಚುರುಕುಗೊಂಡಿದ್ದು ಯಾರು ಈ ಸ್ಟಿಂಗ್ ಆಪರೇಷನ್ ಮೂಲಕ ಸಿದ್ದರಾಮಯ್ಯನವರ ಹೆಸರನ್ನು ಕೆಡಿಸಲು ಉನ್ನಾರ ನಡೆಸಿದ್ದಾರೆ ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಂಸದ ಸುನಿಲ್ ಬೋಸ್ ರವರು ಒತ್ತಾಯಿಸಿದ್ದಾರೆ ಅವರು ಇಂದು ಚಾಮರಾಜನಗರ ಲೋಕಸಭಾ ವ್ಯಾಪ್ತಿಗೆ ಬರುವ ಮೈಸೂರು ನಂಜನಗೂಡು ಊಟಿರಸ್ತೆಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಪರಿಶೀಲನೆಗೆ ಆಗಮಿಸಿದ ವೇಳೆ ನಂಜನಗೂಡಿನ ಪ್ರವಾಸಿ ಮಂದಿರದಲ್ಲಿ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಸುನಿಲ್ ಬೋಸ್ ರವರು ಮಾತನಾಡುತ್ತಾ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು 40 ವರ್ಷಗಳ ರಾಜಕೀಯ ಅನುಭವದ ಹಿರಿಯರು ಎರಡು ಬಾರಿ ಮುಖ್ಯಮಂತ್ರಿಗಳಾಗಿದ್ದಾರೆ ವಿರೋಧ ಪಕ್ಷದ ನಾಯಕ ಆಗಿದ್ದಾರೆ ಉಪಮುಖ್ಯಮಂತ್ರು ಆಗಿದ್ದಾರೆ ಹಾಗೂ ಬಡವರು ದೀನದಲಿತರ ಪರವಾಗಿ ರೈತರ ಪರವಾಗಿ ಈ ಸ್ಟಿಂಗ್ ಆಪರೇಷನ್ ಮಾಡಿ ಸಿದ್ದರಾಮಯ್ಯನವರ ಚಾರಿತ್ರಿವದೆ ಮತ್ತು ಅವರ ಹೆಸರಿಗೆ ಕಪ್ಪು ಮಸಿ ಬೆಳೆಯುವಂತಹ ಕೆಲಸಕ್ಕೆ ಕೈ ಹಾಕಿದ್ದಾರೆ ಅಂತವರ ವಿರುದ್ಧ ಕಾನೂನಿನ ಪ್ರಕಾರ ಅವರನ್ನು ಪತ್ತೆ ಹಚ್ಚಿ ಶಿಕ್ಷೆಗಳ ಪಡಿಸಬೇಕೆಂದು ಸುನಿಲ್ ಬೋಸ್ ರವರು ಸರ್ಕಾರವನ್ನು ಆಗ್ರಹಿಸಿದರು ಅಲ್ಲದೆ ಈ ಬಾರಿಯ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಬಹಳ ಚೆನ್ನಾಗಿ ಅಚ್ಚುಕಟ್ಟಾಗಿ ನಡೆದಿದೆ ಇತ್ತೀಚಿನ ವಿಚಾರಗಳಲ್ಲಿ ರಾಜಭಾರತದ ಪ್ರಮೋದ ದೇವಿಯವರು ಸರ್ಕಾರಕ್ಕೆ ತಮ್ಮದೇ ಆದ ಒಂದು ಮನವಿಯನ್ನ ನೀಡಿದ್ದಾರೆ ಈ ವಿಚಾರವಾಗಿ ಮುಖ್ಯಮಂತ್ರಿಗಳು ಕ್ರಮ ಕೈಗೊಳ್ಳುತ್ತಾರೆ ಜಿಲ್ಲಾ ಉಸ್ತುವಾರಿ ಮಂತ್ರಿಗಳಾದ ಡಾ. ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಈ ವಿಚಾರವಾಗಿ ಮಾತನಾಡಿದ್ದಾರೆ ಈ ಬಗ್ಗೆ ನಾನು ಹೆಚ್ಚು ಏನು ಹೇಳಲು ಹೋಗಲ್ಲ ರಾಜಮನೆತನದವರು ಅಂದಿನ ಕಾಲದಿಂದಲೂ ಸಂಪ್ರದಾಯಬದ್ಧವಾಗಿ ಮೈಸೂರು ದಸರ ಕಾರ್ಯಕ್ರಮದಲ್ಲಿ ಭಾಗಿಯಾಗಿ ಬರುತ್ತಿದ್ದಾರೆ ಅವ-ರಿಲ್ಲದೆ ಮೈಸೂರು ದಸರಾ ಕಾರ್ಯಕ್ರಮ ನಡೆಯಲು ಸಾಧ್ಯವಿಲ್ಲ ಎಂದು ಹೇಳಿದರು ಆದರೆ ಸಚಿವರು ಹೇಳಿರುವ ಮಾತುಗಳನ್ನು ಬೇರೆ ರೀತಿಯಲ್ಲಿ ಅರ್ಥೈಸಿಕೊಳ್ಳುವುದು ಬೇಕಾಗಿಲ್ಲ ಈ ವಿಚಾರವನ್ನು ಇಲ್ಲಿಗೆ ಬಿಟ್ಟು ಇದಕ್ಕೆ ಕೊನೆ ಆಡುವಂತೆ ಸಂಸದರು ಹೇಳಿದರು ಈ ಸಂದರ್ಭದಲ್ಲಿ ಶ್ರೀಕಂಸ್ವರ ದೇವಾಲಯದ ವ್ಯವಸ್ಥಾಪನ ಸಮಿತಿಯ ಮಾಜಿ ಅಧ್ಯಕ್ಷ ಹೆಜ್ಜಿಗೆ ಆರ್ ಇಂದನ್ ಬಾಬು ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಕೆ ಬಿ ಸ್ವಾಮಿ ಚೋಳರಾಜು ತಾಲೂಕು ಕುರವ ವೈ ಸಮಾಜದ ಮುಖಂಡ ಕೆಂಪಣ್ಣ ಗುತ್ತಿಗೆದಾರ ಹೆಜ್ಜಿಗೆ ರವಿ ಕುಮಾರ್ ಗೋಪಾಲಕೃಷ್ಣ ಪುಟ್ಟಣ್ಣ ಹಾಲುಮತ ಮಹಾಸಭಾ ಅಧ್ಯಕ್ಷ ಕುಮಾರ ಗೌಡ ನಗರಲೆ ಮನು ನರಸಿಂಹಮೂರ್ತಿ ತಾಂಡವಪುರದ ಮೋಹನ್ ಕತ್ವಡಿಪುರ ಸಿದ್ದಯ್ಯ ಗುರುಪಾದು ಸೇರಿದಂತೆ ವಿವಿಧ ಇಲಾಖೆ ಅಧಿಕಾ-ರಿಗಳು ಕಾಂಗ್ರೆಸ್ ಮುಖಂಡರು ಈ ಸಂದರ್ಭದಲ್ಲಿ ಹಾಜರಿದ್ದರು.

ಸಮಸ್ಯೆ ಎದುರಿಸಿ ಮಾನಸಿಕವಾಗಿ ಸದೃಢರಾಗಿ– ಅರವಿಂದ ಕುಮಾರಮಟಮಾರಿ

ನೈಜ್ಯ ದೆಸೆ ನ್ಯೂಸ್

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ರಾಯಚೂರು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರ ಮಟಮಾರಿ ಇವರಿಂದ ತುರುಕನಡೋಣ ಉಪಕೇಂದ್ರದ ಪ್ರೌಢ ಶಾಲೆಯಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಮಾಹಿತಿ ನೀಡುವ ಸಲುವಾಗಿ ಇಂದು ವಿಶ್ವ ಮಾನಸಿಕ ದಿನವನ್ನು ಆಚರಿಸಲಾಯಿತು,ಈ ದಿನಾಚರಣೆಯ ಬಗ್ಗೆ ಮಟಮಾರಿ ಆರೋಗ್ಯ ಕೇಂದ್ರದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಅರವಿಂದ್ ಕುಮಾರ ಇವರು ಮಾತನಾಡುತ್ತ,ಇದರ ಮುಖ್ಯ ಉದ್ದೇಶ

ಜಗತ್ತಿನಾದ್ಯಂತ ಮಾನಸಿಕ ಆರೋಗ್ಯ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಮಾನಸಿಕ ಅಸ್ವಸ್ಥತೆಗಳ ಬಗ್ಗೆ ಇರುವ ತಪ್ಪು ಅಭಿಪ್ರಾಯ ಅಥವಾ ಕಳಂಕವನ್ನು ದೂರ ಮಾಡುವುದಾಗಿದೆ, ವಿಶ್ವ ಮಾನಸಿಕ ಆರೋಗ್ಯ ದಿನದ ಇತಿಹಾಸ ಬಗ್ಗೆ ತಿಳಿಸುತ್ತಾ, ಇದು 1992 ರಂದು World Federation for Mental Health (WFMH) ಸಂಸ್ಥೆಯಿಂದ ಮೊದಲ ಬಾರಿಗೆ October 10, 1992 ರಿಂದ ಇದರ ಆಚರಣೆ ಆರಂಭಿಸಲಾಯಿತು. ಮೊದಲಿಗೆ ಇದಕ್ಕೆ ಯಾವುದೇ ಘೋಷ ವಾಕ್ಯ ಇರಲಿಲ್ಲ.



1994 ರಿಂದ ಪ್ರತಿ ವರ್ಷ ಒಂದು ಘೋಷ ವಾಕ್ಯ ಕೊಡಲು ಶುರು ಮಾಡಿದರು. – 1994 ರ ಮೊದಲ Theme: "Improving the Quality of Mental Health Services throughout the World" 1994 ನಂತರ ಘಈಒಊ ಜೊತೆ World Health Organization (WHO) ಕೈಜೋಡಿಸಿತು. ಇದ–ರಿಂದ ಇದು ಜಾಗತಿಕ ಮಹತ್ವದ ದಿನ ಆಯಿತು. ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸಲು ಹಸಿರು ರಿಬ್ಬನ್ (Green Ribbon) ಅನ್ನು ಸಂಕೇತ (Symbol)ಆಗಿಬಳಸುತ್ತಾರೆ. ನಮ್ಮ ದೇಶದಲ್ಲಿ – 1982 ರಿಂದ – National Mental Health Programme (NMHP) ಜಾರಿಯಲ್ಲಿದ್ದು, 1996 ರಿಂದ ಪ್ರತಿ ಜಿಲ್ಲೆಯಲ್ಲಿ – District Mental Health Programme (DMHP) ಅನುಷ್ಠಾನದಲ್ಲಿದೆ. 2017 ರಲ್ಲಿ Mental Healthcare Act 2017 – ಮಾನಸಿಕ ಆರೋಗ್ಯಕ್ಕೆ ಹಕ್ಕು (Right) ಎಂದು ಕಾನೂನು ಮಾಡಲಾಯಿತು. ಮಾನಸಿಕ ಸಮಸ್ಯೆ ಇರುವವರು, ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ದೂರವಾಣಿ ಸಂಖ್ಯೆ – Tele-MANAS -2022 . Toll Free 14416 /1800–891–4416 ಗೆ ಕರೆ ಮಾಡಿ ಪರಿಹಾರ ಕಂಡು ಕೊಳ್ಳಬಹುದು. ಈ ವರ್ಷ 2026 ರ ಘೋಷ ವಾಕ್ಯ, > "Lived Experiences Heard - Real Voices, Real Change" > ಕನ್ನಡದಲ್ಲಿ: "ಜೀವಂತ ಅನುಭವಗಳು ಕೇಳಿದ – ನಿಜವಾದ ಧ್ವನಿಗಳು, ನಿಜವಾದ ಬದಲಾವಣೆಗಳು" ಅರ್ಥ: ಈ ವರ್ಷದ Theme ಮಾನಸಿಕ ಸಮಸ್ಯೆ ಅನುಭವಿಸಿದವರನ್ನೇ ಮುಂದೆ ತಂದು ಅವರ ಕಥೆಯನ್ನು ಕೇಳುವುದು. ವೈದ್ಯರು ಮಾತ್ರವಲ್ಲ, ರೋಗಿಗಳ ಧ್ವನಿ ಕೂಡ ಮುಖ್ಯ ಎಂದು WHO ಹೇಳಿದೆ. ಸಮುದಾಯ ಆರೋಗ್ಯ ಅಧಿಕಾರಿ ಶಾಂತಕುಮಾರ್ ಮಾತನಾಡುತ್ತ, ವಿದ್ಯಾರ್ಥಿಗಳಿಗೆ ಮಾನಸಿಕ ಒತ್ತಡದಿಂದ ಹೊರಬನ್ನಿ ಎನ್ನುವ ಕಿವಿಮಾತು ಹೇಳಿದರು. ಸಮಾಜದಲ್ಲಿ ನೀವುಗಳು ಮಾನಸಿಕ ವ್ಯಕ್ತಿಗಳ ಮಾತು – ಆಲಿಸಿ (Listen) – ಅವರ ಕಥೆ ಕೇಳಿ, – ಅರ್ಥಮಾಡಿಕೊಳ್ಳಿ (Understand) – ಅವರಿಗೆ ಕರುಣೆ ತೋರಿ,ತಿ–ರಸ್ಕಾರ ಬೇಡ – ಬೆಂಬಲ ಸೂಚಿಸಿ (Support) – ಕಳಂಕ ಇಲ್ಲದೆ ಮಾತನಾಡಲು ಬಿಡಿ. ಅವರಲ್ಲಿ – ಬದಲಾವಣೆಯನ್ನು ರಚಿಸಿ (Create Change) – ನೀತಿ ನಿರ್ಧಾರಗಳಲ್ಲಿ ಅವರನ್ನೂ ಸೇರಿಸಿ ಎಂದು ಹೇಳಿದರು. ಶಾಲಾ ಮುಖ್ಯೋಪಾಧ್ಯಾಯರು ಶ್ರೀ ಮಲ್ಲಪ್ಪ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನಕ್ಕೆ ಚಾಲನೆ

ಕ್ಷಯರೋಗದ ಲಕ್ಷಣಗಳು ಕಂಡುಬಂದ ಕೂಡಲೇ ಪರೀಕ್ಷೆ ಮಾಡಿಸಿ ॥ಡಾ. ಶರಣಬಸವರಾಜ

ನೈಜ್ಯ ದೆಸೆ ನ್ಯೂಸ್

ಮಾನವಿ: ಸಾರ್ವಜನಿಕರಲ್ಲಿ ಕ್ಷಯರೋಗದ ಕು–ರಿತು ಅರಿವು ಮೂಡಿಸಿ, ರೋಗಿಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆಹಚ್ಚಿ ಸೂಕ್ತ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿರುವ ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನಕ್ಕೆ ತಾಲೂಕು ಆರೋಗ್ಯಾಧಿಕಾರಿಗಳಾದ ಡಾ. ಶರಣಬಸವರಾಜ ಅವರು ಚಾಲನೆ ನೀಡಿದರು.

ಈ ಆಂದೋಲನವು ದಿನಾಂಕ 27/10/2026ರಿಂದ 08/12/2026ರವರೆಗೆ ನಡೆಯಲಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಅವರು ತಿಳಿಸಿದರು. ಕ್ಷಯರೋಗದ ಲಕ್ಷಣಗಳು ಕಂಡುಬಂದ ಕೂಡಲೇ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಪರೀಕ್ಷೆ ಮಾಡಿಸಿಕೊಳ್ಳಬೇಕು. ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕ್ಷಯರೋಗದ ಪರೀಕ್ಷೆ ಮತ್ತು ಚಿಕಿತ್ಸಾ



ಸೌಲಭ್ಯಗಳು ಉಚಿತವಾಗಿ ಲಭ್ಯವಿದ್ದು, ಸಾರ್ವಜನಿಕರು ಯಾವುದೇ ನಿರ್ಲಕ್ಷ್ಯ ಮಾಡದೆ ಈ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು ಎಂದು ಕರೆ ನೀಡಿದರು.

ನಂತರ ಕ್ಷಯರೋಗ ಮೇಲ್ವಿಚಾರಕರಾದ ಶಿವರಾಜ ಅವರು ಕ್ಷಯರೋಗದ ಲಕ್ಷಣಗಳು, ಹರಡುವ ವಿಧಾನಗಳು, ಪತ್ತೆಹಚ್ಚುವಿಕೆ ಹಾಗೂ ತಡೆಗಟ್ಟುವ ಕ್ರಮಗಳ ಕುರಿತು ಮಾಹಿತಿ ನೀಡಿ ಜನಜಾಗೃತಿ ಮೂಡಿಸಿದರು. ದೀರ್ಘಕಾಲದ ಕೆಮ್ಮು, ಜ್ವರ, ರಾತ್ರಿ ವೇಳೆ ಬೆವರುವುದು, ಕಾರಣವಿಲ್ಲದೆ ತೂಕ ಕಡಿಮೆಯಾಗುವುದು ಮುಂತಾದ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣವೇ ಆರೋಗ್ಯ ಕೇಂದ್ರದಲ್ಲಿ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು. ಕ್ಷಯರೋಗವನ್ನು ಆರಂಭಿಕ ಹಂತದಲ್ಲಿಯೇ ಪತ್ತೆಹಚ್ಚಿ, ವೈದ್ಯರ ಸಲಹೆಯಂತೆ ಸಂಪೂರ್ಣ ಚಿಕಿತ್ಸೆಯನ್ನು ಪಡೆಯುವುದರಿಂದ ರೋಗವನ್ನು ಗುಣಪಡಿಸಲು ಹಾಗೂ ಇತರರಿಗೆ ಹರಡುವುದನ್ನು ತಡೆಯಲು ಸಾಧ್ಯವಿದೆ. ಆದ್ದರಿಂದ ಸಾರ್ವಜನಿಕರು ಕ್ಷಯರೋಗದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಬದಿಗಿಟ್ಟು, ರೋಗದ ಲಕ್ಷಣಗಳ ಕುರಿತು ಅರಿವು ಬೆಳೆಸಿಕೊಂಡು ಸೂಕ್ತ ಸಮಯದಲ್ಲಿ ಪರೀಕ್ಷೆ ಮತ್ತು ಚಿಕಿತ್ಸೆ ಪಡೆಯಬೇಕು ಎಂದು ಮನವಿ ಮಾಡಲಾಯಿತು.

ಕ್ಷಯರೋಗ ಮುಕ್ತ ಸಮಾಜ ನಿರ್ಮಾಣಕ್ಕೆ ಸಾರ್ವಜನಿಕರ ಸಹಕಾರ ಅತ್ಯಗತ್ಯ. ಸಕ್ರಿಯ ಕ್ಷಯರೋಗ ಪತ್ತೆ ಆಂದೋಲನದ ಮೂಲಕ ಅರ್ಹರಿಗೆ ಪರೀಕ್ಷೆ ಮತ್ತು ಚಿಕಿತ್ಸಾ ಸೌಲಭ್ಯ ತಲುಪಿಸಿ, ಕ್ಷಯರೋಗ ನಿಯಂತ್ರಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಆರೋಗ್ಯ ಇಲಾಖೆ ಕರೆ ನೀಡಿತು. ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗದವರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು


ದಿವಂಗತ ಪುನೀತ್ ರಾಜ್‌ಕುಮಾರ್ ಪುಣ್ಯಸ್ಮರಣೆ ಅಂಗವಾಗಿ ಉಚಿತ ನೇತ್ರ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ

25 ಬಡವರಿಗೆ ಉಚಿತ ಕಣ್ಣಿನ ಶಸ್ತ್ರಚಿಕಿತ್ಸೆ

ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ದಿವಂಗತ ನಟ ಪುನೀತ್ ರಾಜ್‌ಕುಮಾರ್ ಅವರ ಐದನೇ ವರ್ಷದ ಪುಣ್ಯಸ್ಮರಣೆಯ ಅಂಗವಾಗಿ ಇನ್ನರ್ ವೀಲ್ ಕ್ಲಬ್ ಕುಷ್ಟಗಿ ಹಾಗೂ ಡಾ. ಸುಭಾಷ್ ಖಾಕಂಡಕಿ ಅವರ ಸಹಯೋಗದಲ್ಲಿ ಉಚಿತ ಕಣ್ಣಿನ ತಪಾಸಣೆ ಮತ್ತು ಕಣ್ಣಿನ ಶಸ್ತ್ರಚಿಕಿತ್ಸಾ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಆರ್ಥಿಕವಾಗಿ ಹಿಂದುಳಿದ 25 ಜನರಿಗೆ ಉಚಿತ ಕಣ್ಣಿನ ಶಸ್ತ್ರಚಿಕಿತ್ಸೆ ನಡೆಸಲು ಉದ್ದೇಶಿಸಲಾಗಿದೆ.

ಸಮಾಜಮುಖಿ ಸೇವಾ ಕಾರ್ಯಗಳ ಮೂಲಕ ಜನರ ಆರೋಗ್ಯದ ಕಾಳಜಿ ವಹಿಸುವ ಉದ್ದೇಶದಿಂದ ಈ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಬಡ ಹಾಗೂ ಅಗತ್ಯವಿರುವ ಜನರಿಗೆ ನೇತ್ರ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆಯ ಸೌಲಭ್ಯ ಒದಗಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ.



ಕಾರ್ಯಕ್ರಮವನ್ನು ಕೊಪ್ಪಳ ಜಿಲ್ಲಾಧಿಕಾರಿ ಡಾ. ಸುರೇಶ್ ಬಿ. ಇಟ್ನಾಳ್ ಉದ್ಘಾಟಿಸಲಿದ್ದು, ರಾಘವೇಂದ್ರ ನೇತ್ರ ಸೇವಾ ಕೇಂದ್ರದ ಅಧ್ಯಕ್ಷೆ ಇಲಕಲ್ ಕುಷ್ಟಗಿ ಶ್ರೀಮತಿ ಸುದೀಪ್ತಾ ಖಾಕಂಡಕಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕುಷ್ಟಗಿ ತಹಶೀಲ್ದಾರ್ ಶ್ರೀಮತಿ ಅಶೋಕ ಶಿಗ್ಗಾವಿ, ಕುಷ್ಟಗಿ ಸಿಪಿಐ ವಿಶ್ವನಾಥ ಹಿರೇಗೌಡರ, ಪುರಸಭೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವೆಂಕಪ್ಪ ಬೀಳಗಿ, ನೇತ್ರ ತಜ್ಞೆ ಡಾ. ಸುಶೀಲ ಖಾಕಂಡಕಿ, ತಾಲೂಕು ಆರೋಗ್ಯಾಧಿಕಾರಿ ಡಾ. ಆನಂದ ಗೋಟೂರ ಹಾಗೂ ಇನ್ನರ್ ವೀಲ್ ಡಿಸ್ಟ್ರಿಕ್ಟ್ 316ರ ಕಾರ್ಯದರ್ಶಿ ಡಾ. ಪಾರ್ವತಿ ಪಳೋಟಿ ಭಾಗವಹಿಸಲಿದ್ದಾರೆ. ಗೌರವಾನ್ವಿತ ಅತಿಥಿಗಳಾಗಿ ವಂದನಾ ಅಭಿನಂದನ ಗೋಗಿ ಉಪಸ್ಥಿತರಿರಲಿದ್ದಾರೆ. ಕಾರ್ಯಕ್ರಮದ ಆಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಇನ್ನರ್ ವೀಲ್ ಕ್ಲಬ್ ಕುಷ್ಟಗಿ ಅಧ್ಯಕ್ಷೆ ಶ್ರೀಮತಿ ಗೌರಮ್ಮ ಕುಡತನಿ, ಕಾರ್ಯದರ್ಶಿ ಶ್ರೀಮತಿ ಶ್ರೀದೇವಿ ಮಸ್ಕಿಮಠ ಹಾಗೂ ಕ್ಲಬ್‌ನ ಸರ್ವ ಸದಸ್ಯರು ಶಿಬಿರದ ಯಶಸ್ಸಿಗೆ ಶ್ರಮಿಸುತ್ತಿದ್ದಾರೆ.

ದಿವಂಗತ ಪುನೀತ್ ರಾಜ್‌ಕುಮಾರ್ ಅವರ ಸಮಾಜಮುಖಿ ಸೇವಾ ಮನೋಭಾವವನ್ನು ಸ್ಮರಿಸುವುದರ ಜೊತೆಗೆ ಅಗತ್ಯವಿರುವವರಿಗೆ ಕಣ್ಣಿನ ಆರೈಕೆ ಮತ್ತು ಶಸ್ತ್ರಚಿಕಿತ್ಸೆಯ ನೆರವು ಒದಗಿಸುವ ಈ ಕಾರ್ಯಕ್ರಮ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗುವ ನಿರೀಕ್ಷೆಯಿದೆ.

ಅಂಬಾಮಠದ ಪೀಠಾಧಿಪತಿ ನಾಮದೇವಗೌಡ ಶರಣರ ವಿರುದ್ಧದ ಆರೋಪ ಸತ್ಯಕ್ಕೆ ದೂರ: ಹಿರಿಯ ನ್ಯಾಯವಾದಿ ವಿ.ಎಂ. ಮೇಟಿ ಮಠದ ಅಭಿವೃದ್ಧಿಗೆ ಸಹಕರಿಸಿದವರೇ ಈಗ ವಿರೋಧಿಸುತ್ತಿರುವುದು ವಿಪರ್ಯಾಸ: ಪತ್ರಿಕಾಗೋಷ್ಠಿಯಲ್ಲಿ ಗಣ್ಯರ ಅಭಿಪ್ರಾಯ

ನೈಜ್ಯ ದೆಸೆ ನ್ಯೂಸ್

ಅರಕೇರಾ: ರಾಯಚೂರು ಜಿಲ್ಲೆಯ ಅರಕೇರಾ ತಾಲೂಕಿನ ಮದರಕಲ್ ಗ್ರಾಮದ ಅಂಬಾಮಠದ ಪೀಠಾಧಿಪತಿ ಸಂತ ನಾಮದೇವಗೌಡ ಶರಣ–ರ ವಿರುದ್ಧ ಮಾಡಲಾಗಿರುವ ಆರೋಪಗಳು ಸತ್ಯಕ್ಕೆ ದೂರವಾಗಿವೆ ಎಂದು ದೇವದುರ್ಗದ ಹಿರಿಯ ನ್ಯಾಯವಾದಿ ವಿ.ಎಂ. ಮೇಟಿ ಅಭಿಪ್ರಾಯಪಟ್ಟರು.

ಮದರಕಲ್ ಗ್ರಾಮದ ಅಂಬಾಮಠದಲ್ಲಿ ಸೋಮವಾರ ನಡೆದ ಹುಣ್ಣಿಮೆ ವಿಶೇಷ ಅನುಭವ ಕಾರ್ಯಕ್ರಮದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಹನುಮಗೌಡ ಮದರಕಲ್ ಅವರ ನೇತೃತ್ವದಲ್ಲಿ ಅ. 19ರಂದು ಪಲಕನಮರಡಿ ಗ್ರಾಮ ಪಂಚಾಯಿತಿ ಎದುರು ಧರಣಿ ನಡೆಸಿ ಅಂಬಾಮಠದ ಪೀಠಾಧಿಪತಿಗಳ ವಿರುದ್ಧ ಆರೋಪ ಮಾಡಿರುವುದು ಖಂಡನೀಯ ಎಂದರು. ನಾಮದೇವಗೌಡ ಶರಣರನ್ನು ಮದರಕಲ್ ಗ್ರಾಮಕ್ಕೆ ಕರೆತಂದು, ಮಠದ ಹೆಸರಿನಲ್ಲಿ ಜಾಗ ಗ್ರಾಮ ಪಂಚಾಯತ್ ನಲ್ಲಿ ನೋಂದಣಿ ಮಾಡಿಸುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದವರೇ ಈಗ ಮಠದ ವಿರುದ್ಧ ಆರೋಪ ಮಾಡುತ್ತಿರುವುದು ಸರಿಯಲ್ಲ ಎಂದು ಹೇಳಿದರು. ಈ ಬೆಳವಣಿಗೆಗಳು ಶರಣರ ಘನತೆಗೆ ಧಕ್ಕೆ ತರುವ ಪ್ರಯತ್ನದಂತಿವೆ ಎಂದು ಆರೋಪಿಸಿದರು.

ಗುರುಗಳನ್ನು ಗೌರವಿಸಿ, ಮಠವನ್ನು ಉಳಿಸಿಕೊಳ್ಳಿ: ಶ್ರೀ ಗುರುಬಸವ ರಾಜಗುರುಗಳು ಈ ಸಂದರ್ಭದಲ್ಲಿ ಮಾತನಾಡಿದ ಮಲದಕಲ್‌ನ ಶ್ರೀ ಗುರುಬಸವ ರಾಜಗುರುಗಳು, ಮದರಕಲ್



ಆರೋಪಗಳಿದ್ದರೆ ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸಲಿ: ನಾಮದೇವಗೌಡ ಶರಣರು

ಅಂಬಾಮಠದ ಪೀಠಾಧಿಪತಿ ಸಂತ ನಾಮದೇವಗೌಡ ಶರಣರು ಮಾತನಾಡಿ, "ನನ್ನ ಸ್ವಂತ ಊರು ಮಸ್ಕಿ ತಾಲೂಕಿನ ಹುಸ್ಕಿಹಾಳ. ನಂತರ ಸಿಂಧನೂರು ನಲ್ಲಿ ಸಮಾಜ ಸೇವೆ ಸಲ್ಲಿಸುತ್ತಿರುವಾಗ ಅಲ್ಲಿ ಸಾರ್ವಜನಿಕ ಸೇವೆ ಮಾಡುತ್ತಿದ್ದ ಸಂದರ್ಭದಲ್ಲಿ ಮದರಕಲ್ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ನನ್ನನ್ನು ಗ್ರಾಮಕ್ಕೆ ಕರೆತಂದರು. ಮಠ ನಿರ್ಮಿಸಿ, ಗುರುಗಳ ಸ್ಥಾನ ತುಂಬಲು ನಿಮ್ಮಂತಹ ಶರಣರ ಅಗತ್ಯವಿದೆ ಎಂದು ಆಹ್ವಾನಿಸಿದ್ದರು" ಎಂದು ತಿಳಿಸಿದರು

ಗ್ರಾಮದ ಅಂಬಾಮಠವು ಭಕ್ತರ ನಂಬಿಕೆ ಮತ್ತು ಸಹಕಾರದಿಂದ ಬೆಳೆದುಬಂದಿದೆ. ಗುರುಗಳನ್ನು ಗ್ರಾಮಕ್ಕೆ ಕರೆತಂದ ಬಳಿಕ ಅವರನ್ನು ಗೌರವಿಸಿ, ಮಠದ ಅಭಿವೃದ್ಧಿಗೆ ಸಹಕ–ರಿಸುವುದು ಭಕ್ತರ ಜವಾಬ್ದಾರಿಯಾಗಿದೆ ಎಂದರು.

ಗುರುಗಳನ್ನು ಅವಮಾನಿಸುವುದು ಮಹಾಪಾಪ. ಸಣ್ಣಪುಟ್ಟ ವ್ಯತ್ಯಾಸಗಳು ಅಥವಾ ತಪ್ಪುಗಳಿದ್ದರೆ ಅವುಗಳನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬೇಕು. ಮೊದಲು ಗುರುಗಳನ್ನು ಕರೆತಂದು ಮಠದ ನಿರ್ಮಾಣಕ್ಕೆ ಕೈಜೋಡಿಸಿದವರೇ ಈಗ ವಿರೋಧ ವ್ಯಕ್ತಪಡಿಸುತ್ತಿರುವುದು ವಿಪರ್ಯಾಸ ಎಂದು ಅಭಿಪ್ರಾಯಪಟ್ಟರು. ಸತ್ಸಂಗ, ಪರಸ್ಪರ ಗೌರವ ಮತ್ತು ಸಹಬಾಳ್ವೆಗೆ ಆದ್ಯತೆ ನೀಡಿ ಮಠದ ಘನತೆಯನ್ನು ಕಾಪಾಡಲು ಸದ್ಭಕ್ತರು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಮುಂದಾಗಬೇಕು ಎಂದು ಮನವಿ ಮಾಡಿದರು.

ಅನಗತ್ಯ ಗೊಂದಲ ಸೃಷ್ಟಿಸಬೇಡಿ: ನಿವೃತ್ತ ತಹಶೀಲ್ದಾರ್ ವೆಂಕನಗೌಡ ನವಿಲುಗುಡ್ಡದ ನಿವೃತ್ತ ತಹಶೀಲ್ದಾರ್ ವೆಂಕನಗೌಡ ಮಾತನಾಡಿ, ಮಸ್ಕಿ ತಾಲೂಕಿನ ಹುಸ್ಕಿಹಾಳದಿಂದ ಸಿಂಧನೂರು ನಲ್ಲಿ ಸಮಾಜ ಸೇವೆ ಮಾಡುತ್ತಿದ್ದ ನಾಮದೇವಗೌಡ ಶರಣ–ರನ್ನು ಮದರಕಲ್ ಗ್ರಾಮಕ್ಕೆ ಕರೆತಂದು ಮಠ ನಿರ್ಮಿಸುವ ಸಂದರ್ಭದಲ್ಲಿ ಗ್ರಾಮಸ್ಥರು ಹಾಗೂ ಈಗ ಆರೋಪ ಮಾಡುತ್ತಿರುವವರೂ ಸಹಕರಿಸಿದ್ದರು ಎಂದು ತಿಳಿಸಿದರು.

ಮಠದ ನಿರ್ಮಾಣ ಮತ್ತು ಅಭಿವೃದ್ಧಿಯಲ್ಲಿ ಒಟ್ಟಾಗಿ ಕೆಲಸ ಮಾಡಿದವರು

ಗಣ್ಯರ ಉಪಸ್ಥಿತಿ

ಪತ್ರಿಕಾಗೋಷ್ಠಿಯಲ್ಲಿ ಅಂಬಾಮಠದ ಪೀಠಾಧಿಪತಿ ಸಂತ ನಾಮದೇವಗೌಡ ಶರಣರು, ಮಲದಕಲ್‌ನ ಶ್ರೀ ಗುರುಬಸವ ರಾಜಗುರುಗಳು, ನವಿಲುಗುಡ್ಡದ ನಿವೃತ್ತ ತಹಶೀಲ್ದಾರ್ ವೆಂಕನಗೌಡ, ದೇವದುರ್ಗದ ಹಿರಿಯ ನ್ಯಾಯವಾದಿ ವಿ.ಎಂ. ಮೇಟಿ, ಕರಡಿಗುಡ್ಡದ ಮಾಜಿ ಎಪಿಎಂಸಿ ಅಧ್ಯಕ್ಷ ರಾಮನಗೌಡ, ಶಿವಪ್ಪ ಪಲಕನಮರಡಿ, ಜಾಲಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಗೋವಿಂದಪ್ಪ ಅಲಗೇರಿ, ಶಂಕರಗೌಡ ಮಾಲಿಪಾಟೀಲ್, ಊಟಿಯ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಅಮರೇಶ್, ಬಸಣ್ಣ ರಾಮಲು ಗಲಗ್ ಗುತ್ತೇದಾರ, ಮ್ಯಾಕಲದೊಡ್ಡಿಯ ಚನ್ನಬಸವ ನಾಯಕ, ದಲಿತ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ವಿಜಯರಾಣಿ, ಚನ್ನಬಸವ ತಾತ ಗಲಗ್, ಸಾಬಣ್ಣ ಹೂಗಾರ್, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಶಿವು ಪಾಟೀಲ್, ಅಂಬಣ್ಣ ಮೂಡಲಗುಂಡ, ಸಾಬಣ್ಣ ಮೂಡಲಗುಂಡ, ಮಾನಪ್ಪ ನಾಯಕ್ ಕ್ಯಾದಿಗ್ಗೆರ, ಬಸವರಾಜ ಕರಿಹೋನಿ, ಮದರಕಲ್‌ನ ಹನುಮಂತ ಬಡಿಗೇರ್, ಹನುಮಂತ ಅನ್ವರಿ, ದೇವನಗೌಡ, ಸಿದ್ದಪ್ಪಗೌಡ, ಗ್ರಾಮ ಪಂಚಾಯಿತಿ ಸದಸ್ಯ ಮಾನಯ್ಯ, ಅಲ್ಲಿಸಾಬ್, ಸಿದ್ದಣ್ಣ, ರಂಗಪ್ಪ, ಹೊಸೂರು ಮಹದೇವಪ್ಪ ಶರಣರು, ಬಸವರಾಜ ಹೊಸೂರು, ರಂಗಣ್ಣ ಹರಿಜನ್, ಶಿವಣ್ಣ ಉಪ್ಪಾರ್, ಮುದುಕಪ್ಪ ಕಬ್ಬರ್, ಗಂಗಣ್ಣ ಕಬ್ಬರ್, ನಿಂಗಣ್ಣ ಕುರುಬರ್, ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಕರಿಯಪ್ಪ ಸೋಮನಮರಡಿ ಹಾಗೂ ಶರಣ ಬಸವ ಮ್ಯಾಕಲದೊಡ್ಡಿ ಸೇರಿದಂತೆ ಮಠದ ಸದ್ಭಕ್ತರು ಮತ್ತು ಗ್ರಾಮದ ಹಿರಿಯರು ಉಪಸ್ಥಿತರಿದ್ದರು.

ಈಗ ತಮ್ಮ ವಿರುದ್ಧ ಆರೋಪ ಮಾಡುತ್ತಿರುವವರೂ ಹಿಂದೆ ತಮ್ಮ ಶಿಷ್ಯರಾಗಿದ್ದರು ಎಂದು ಹೇಳಿದ ಅವರು, "ನನ್ನ ವಿರುದ್ಧ ಯಾವುದೇ ಆರೋಪಗಳಿದ್ದರೆ ಅವುಗಳನ್ನು ಸೂಕ್ತ ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸಲಿ" ಎಂದು ಸವಾಲು ಹಾಕಿದರು.

ಮಹಿಳಾ ಸದಸ್ಯರಿಂದಲೂ ಪ್ರತಿಕ್ರಿಯೆ

ಈ ಸಂದರ್ಭದಲ್ಲಿ ಮಹಿಳಾ ಸದಸ್ಯರಾದ ಸಾವಿತ್ರಿ ಅನ್ವರಿ ಮತ್ತು ರೇಣುಕಾ ಕಲ್ಮಾಗೇರಿ ಅವರು ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದರು.

ಈಗ ಪರಸ್ಪರ ವಿರೋಧದ ಹಾದಿ ಹಿಡಿಯುವುದು ಸರಿಯಲ್ಲ. ಸಾರ್ವಜನಿಕರು ಹಾಗೂ ಭಕ್ತರಲ್ಲಿ ಅನಗತ್ಯ ಗೊಂದಲ ಸೃಷ್ಟಿಸಬಾರದು ಎಂದು ಹೇಳಿದರು. ನಾಮದೇವಗೌಡ ಶರಣರು ಭಕ್ತರಿಗೆ ಹಾಗೂ ಸಾರ್ವಜನಿಕರಿಗೆ ಮಾರ್ಗದರ್ಶನ ನೀಡುತ್ತಿದ್ದು, ಮಠವು ಅಭಿವೃದ್ಧಿ ಹೊಂದುತ್ತಿದೆ. ಎಲ್ಲರೂ ಶಾಂತಿ ಮತ್ತು ಸೌಹಾರ್ದ ಕಾಪಾಡಬೇಕು ಎಂದು ಮನವಿ ಮಾಡಿದರು.

ವಚನ ದರ್ಶನ

ಸಂಸಾರಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆವುತ್ತಲಿದೆ.
ಅದಕ್ಕೆ ಅಂಜುವೆ, ಎಂಜಲನೆಂಬೆ.ಭವಭಂಗವ ಮಾಡಿ ಕಾಯೋ
ಕೂಡಲಸಂಗಮದೇವಾ

ಸಂಸಾರ ಸಾಗರದ ತೆರೆ ಕೊಬ್ಬಿ..." ಎಂಬುದು ೧೨ನೇ ಶತಮಾನದ ಸಾಮಾಜಿಕ ಕ್ರಾಂತಿಕಾರಿ ಮತ್ತು ಮಹಾನ್ ಶಿವಶರಣರಾದ ವಿಶ್ವ ಗುರು ಬಸವಣ್ಣನವರು ರಚಿಸಿರುವ ಅತ್ಯಂತ ಪ್ರಸಿದ್ಧವಾದ ವಚನವಾಗಿದೆ.

ಈ ವಚನದಲ್ಲಿ ಬಸವಣ್ಣನವರು ಲೌಕಿಕ ಜೀವನದ (ಸಂಸಾರದ) ಕಷ್ಟ-ಕಾರ್ಪಣ್ಯಗಳನ್ನು ಮತ್ತು ಅದರಿಂದ ಪಾರಾಗಲು ಭಕ್ತಿಯ ದಾರಿಯನ್ನು ಹೇಗೆ ಕಂಡುಕೊಳ್ಳಬೇಕು ಎಂಬುದನ್ನು ಸಮುದ್ರದ ಅಲೆಗಳ ರೂಪಕದ ಮೂಲಕ ಅದ್ಭುತವಾಗಿ ವರ್ಣಿಸಿದ್ದಾರೆ.

ಸಂಸಾರಸಾಗರದ ತೆರೆ ಕೊಬ್ಬಿ ಮುಖದ ಮೇಲೆ ಅಲೆವುತ್ತಲಿದೆ: ನಮ್ಮ ಈ ಲೌಕಿಕ ಜೀವನ ಅಥವಾ ಸಂಸಾರ ಎಂಬುದು ಒಂದು ದೊಡ್ಡ ಸಮುದ್ರವಿದ್ದಂತೆ. ಈ ಸಮುದ್ರದಲ್ಲಿ ಏಳುವ ಆಸೆ, ಆಕಾಂಕ್ಷೆ, ಕಷ್ಟ, ದುಃಖ ಮತ್ತು ಪ್ರಲೋಭನೆಗಳೆಂಬ ಅಲೆಗಳು ಮಿತಿಮೀರಿ (ಕೊಬ್ಬಿ) ಬಂದು ನಮ್ಮ ಮುಖಕ್ಕೆ ಅಪ್ಪಳಿಸುತ್ತಿವೆ. ಅಂದರೆ, ಮನುಷ್ಯನು ಲೌಕಿಕ ಬದುಕಿನ ಜಂಜಾಟಗಳಲ್ಲಿ ಸಂಪೂರ್ಣವಾಗಿ ಸಿಲುಕಿ ಒದ್ದಾಡುತ್ತಿದ್ದಾನೆ.

ಅದಕ್ಕೆ ಅಂಜುವೆ, ಎಂಜಲನೆಂಬೆ: ಈ ಸಂಸಾರದ ಮಾಯೆ ಮತ್ತು ಕಷ್ಟಗಳನ್ನು ನೋಡಿ ನನಗೆ ಭಯವಾಗುತ್ತಿದೆ (ಅಂಜುವೆ). ಈ ಲೌಕಿಕ ಸುಖಗಳು ಶಾಶ್ವತವಲ್ಲ, ಇವು ಎಂಜಲಿನಂತೆ ಅಪವಿತ್ರ ಮತ್ತು ಕ್ಷಣಿಕ ಎಂದು ನನಗೆ ಅರ್ಥವಾಗಿದೆ.

ಭವಭಂಗವ ಮಾಡಿ ಕಾಯೋ ಕೂಡಲಸಂಗಮದೇವಾ:
ಎಲೈ ಕೂಡಲಸಂಗಮದೇವನೇ, ನನ್ನನ್ನು ಈ ಜನನ-ಮರಣಗಳ ಚಕ್ರದಿಂದ (ಭವಬಂಧನದಿಂದ) ಮುಕ್ತಗೊಳಿಸು. ಈ ಭವದ ದುಃಖಗಳನ್ನು ನಾಶಮಾಡಿ (ಭಂಗವ ಮಾಡಿ) ನನ್ನನ್ನು ಕಾಪಾಡು ಎಂದು ಬಸವಣ್ಣನವರು ದೇವರಲ್ಲಿ ಮೊರೆ ಇಡುತ್ತಾರೆ.

ಈ ವಚನದ ಆಳವಾದ ಆಧ್ಯಾತ್ಮಿಕ ತತ್ವವು ಇಂದಿಗೂ ಅನೇಕ ಜನ-ರಿಗೆ ಮಾರ್ಗದರ್ಶಿಯಾಗಿದೆ. ಉತ್ತರ ಕರ್ನಾಟಕದ ಪ್ರಸಿದ್ಧ ಭಜನಾ ಶೈಲಿಯಲ್ಲಿ ಇಂತಹ ತತ್ವಗಳನ್ನು ಇಂದಿಗೂ ಹಾಡಲಾಗುತ್ತದೆ.ಈ ವಚನದ ಭಾವಕ್ಕೆ ಹತ್ತಿರವಿರುವ, ಸಂಸಾರದ ಮಾಯೆಯನ್ನು ವಿವ-ರಿಸುವ ಸುಂದರವಾದ ಉತ್ತರ ಕರ್ನಾಟಕದ ಭಜನಾ ಪದವನ್ನು ನೀವು ಇಲ್ಲಿ ಕೇಳಬಹುದು ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ-ಸಿಂಧನೂರು. 998094144

ಅಪ್ಪು ಆತ್ಮಕ್ಕೆ ಪರಮಾತ್ಮ ಎಂದಿಗೂ ದೂರವಲ್ಲ.

29 ಅಕ್ಟೋಬರ್ 2021 ಕರ್ನಾಟಕಕ್ಕೆ ಕರಾಳ ದಿನ.

ನೈಜ್ಯ ದೆಸೆ ನ್ಯೂಸ್

ಇಂದು ಅದೇ ದಿನ, ಅದೇ ತಾರೀಖು, ಅದೇ ತಿಂಗಳು ಆದರೆ ಐದು ವರ್ಷಗಳ ಅಂತರವಷ್ಟೇ! ಅಪ್ಪು ಅವರು ನಮ್ಮನ್ನು ಅಗಲಿ ಐದು ವರ್ಷಗಳಾಗಿವೆ. ಆದರೂ ಅವರ ನೆನಪು ಮಾಸದ ಮಲ್ಲಿಗೆಯಂತೆ ಸದಾ ಘಮಘಮಿಸುತ್ತಿರುತ್ತದೆ.

ಅಪ್ಪು ಸರ್ ಅವರು ನಮ್ಮ ಜೊತೆಯಲ್ಲಿ ದೈಹಿಕವಾಗಿ ಇಲ್ಲದಿದ್ದರೂ, ನಾವು ಮಾಡುವ ಪ್ರತಿಯೊಂದು ಒಳ್ಳೆಯ ಕೆಲಸದಲ್ಲೂ ನಮ್ಮೊಂದಿಗಿದ್ದಾರೆ ಎಂಬ ಭಾವನೆ ಮೂಡುತ್ತದೆ.
ನಮ್ಮ ಒಳ್ಳೆಯ ಕಾರ್ಯಗಳನ್ನು ಕಂಡು ಸಂತೋಷಿಸುವ ಆ ನಗುಮುಖದ ಒಡೆಯನ ನೆನಪು ಸದಾ ನಮ್ಮೊಂದಿಗಿರುತ್ತದೆ.
ನಿರ್ಗತಿಕರ ಸೇವೆ, ಅಸಹಾಯಕರಿಗೆ ನೆರವು ಮತ್ತು ಮಾನವೀಯತೆಯೇ ಬದುಕಿನ ನಿಜವಾದ ಸಾರ್ಥಕತೆ ಎಂಬುದನ್ನು ಅವರ ಜೀವನ ನಮಗೆ ನೆನಪಿಸುತ್ತದೆ.

ಅವರ ಸೇವೆಗಳು ನಮ್ಮ ಕಣ್ಣೆದು-ರಿಗಿದ್ದರೂ, ಅವರ ಸರಳತೆಯ ಕಾರಣದಿಂದಲೇ ಅವುಗಳ ಆಳವನ್ನು ಅರಿಯಲು ನಮಗೆ ಸಾಧ್ಯವಾಗಲಿಲ್ಲವೇನೋ! ಅವರು ಮಾಡಿದ ಸೇವೆ ಅವರ ಎಡಗೈಗೂ ತಿಳಿಯದಷ್ಟು ನಿಸ್ವಾರ್ಥವಾಗಿತ್ತು ಅನಿಸುತ್ತದೆ. ಇದೇ ನಿಜವಾದ ಮಾನವೀಯತೆಯ ಸೌಂದರ್ಯ.

1.ಮಕ್ಕಳ ಶಿಕ್ಷಣಕ್ಕೆ ನೆರವು

ಪುನೀತ್ ರಾಜ್‌ಕುಮಾರ್ ಅವರು ಬಡ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳ ಶಿಕ್ಷಣ-ಕ್ಕೆ ನೆರವಾಗಿದ್ದರು. ಶಿಕ್ಷಣದಿಂದ ಯಾವ ಮಗುವೂ ವಂಚಿತವಾಗಬಾರದು ಎಂಬ ಆಶಯಕ್ಕೆ ಬೆಂಬಲವಾಗಿ ನಿಂತಿದ್ದರು.
ಸರ್ಕಾರಿ ಶಾಲೆಗಳು ಉಳಿಯಬೇಕು, ಕನ್ನಡ ಭಾಷೆ ಉಳಿದು ಬೆಳೆಬೇಕು ಎಂಬ ಕಾಳಜಿಯೂ ಅವರೊಂದಿಗಿತ್ತು.
ಒಂದು ಮಗುವಿಗೆ ಶಿಕ್ಷಣ ನೀಡುವುದು ಎಂದರೆ, ಒಂದು ಕುಟುಂಬದ ಭವಿಷ್ಯಕ್ಕೆ ಬೆಳಕು ನೀಡಿದಂತೆ.

2.ಮಹಿಳೆಯರ ಬದುಕಿಗೆ ಆಸರೆ

ಮೈಸೂರಿನ ಶಕ್ತಿಧಾಮ ಸಂಸ್ಥೆಯ ಕಾರ್ಯಗಳಿಗೆ ಪುನೀತ್ ಸರ್ ಅವರು ಬೆಂಬಲ ನೀಡಿದ್ದರು.
ಸಂಕಷ್ಟದಲ್ಲಿದ್ದ ಮಹಿಳೆಯರಿಗೆ ಆಶ್ರಯ, ವಸತಿ ಮತ್ತು ಸ್ವಾವಲಂಬಿ ಜೀವನ ನಡೆಸಲು ನೆರವಾಗುವ



ಕಾರ್ಯಗಳಿಗೆ ಕೈಜೋಡಿಸಿದ್ದರು.
ಮಹಿಳೆಯರಿಗೆ ಗೌರವಯುತ ಬದುಕು ದೊರೆಯಬೇಕು. ಅವರಿಗೆ ತಕ್ಕ ಸ್ಥಾನಮಾನ ನೀಡುವುದು ಪ್ರತಿಯೊಬ್ಬರ ಕರ್ತವ್ಯ ಎಂಬ ಸಂದೇಶವನ್ನು ಅವರ ಸೇವಾ ಮನೋಭಾವ ನಮಗೆ ಸಾರುತ್ತದೆ.
ಮಹಿಳೆಯ ಕಣ್ಣೀರನ್ನು ಒರೆಸುವ ಕೈ, ಆಕೆಯ ಬದುಕಿಗೆ ಹೊಸ ಭರವಸೆಯಾಗುತ್ತದೆ.

3. ಕೊರೊನಾ ಸಂಕಷ್ಟದಲ್ಲಿ ನೆರವು

ಕೊರೊನಾ ಸಂಕಷ್ಟದ ಸಮಯದಲ್ಲಿ ಇಡೀ ದೇಶವೇ ಆತಂಕದಲ್ಲಿ ಮುಳುಗಿದ್ದಾಗ, ಪುನೀತ್ ರಾಜ್‌ಕುಮಾರ್ ಅವರು ಕರ್ನಾಟಕದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 50 ಲಕ್ಷ ದೇಣಿಗೆ ನೀಡಿದ್ದರು.
ದುಡ್ಡು ಎಷ್ಟು ಕೊಟ್ಟರು ಎಂಬುದಕ್ಕಿಂತ, ಕಷ್ಟದಲ್ಲಿರುವವರ ನೆರವಿಗೆ ಧಾವಿಸುವ ಮನಸ್ಸು ಎಷ್ಟು ದೊಡ್ಡದು ಎಂಬುದೇ ಮುಖ್ಯ.
ಇಡೀ ಜಗತ್ತೇ ಸಂಕಷ್ಟಕ್ಕೆ ಸಿಲುಕಿದಾಗ, ಸರ್ಕಾರಕ್ಕೆ ಮತ್ತು ಜನರಿಗೆ ನಮ್ಮ ಕೈಲಾದಷ್ಟು ನೆರವು ನೀಡುವುದು ಮಾನವೀಯತೆಯ ಗುಣ.
ಹಣದ ಮೌಲ್ಯ ಅದರ ಮೊತ್ತದಲ್ಲಿಲ್ಲ; ಅದನ್ನು ಅಗತ್ಯವಿರುವವರಿಗೆ ನೀಡುವ ಮನಸ್ಸಿನಲ್ಲಿದೆ.

4.ಅನಾಥಾಶ್ರಮಗಳು ಮತ್ತು ವೃದ್ಧರ ಬಗ್ಗೆ ಕಾಳಜಿ

ಅವರ ರಾಜಕುಮಾರ ಸಿನಿಮಾವನ್ನು ನೋಡಿದಾಗ, ಅನಾಥಾಶ್ರಮದ ಹಿರಿಯರನ್ನು ಪ್ರೀತಿಯಿಂದ ನೋಡಿಕೊಳ್ಳುವ ಮತ್ತು ಅವರ ಬದುಕಿನಲ್ಲಿ ಸಂತೋಷ ತುಂಬುವ ಪಾತ್ರ ನಮ್ಮ ಮನಸ್ಸನ್ನು ಮುಟ್ಟುತ್ತದೆ.
ಅದೊಂದು ಸಿನಿಮಾದ ಕಥೆ ಅಷ್ಟೇ ಎಂದುಕೊಂಡಿದ್ದ ನಮಗೆ, ಪುನೀತ್ ಅವರು ನಿಜ ಜೀವನದಲ್ಲಿಯೂ ಸಮಾಜಸೇವೆಯ ಮೂಲಕ ಅನೇಕರ ಬದುಕಿಗೆ ನೆರವಾಗಿದ್ದರು ಎಂಬುದು ತಿಳಿದಾಗ ಹೆಮ್ಮೆ ಮತ್ತು ಸಂತೋಷವಾಗುತ್ತದೆ.
ಇಂದಿನ ಕಾಲದಲ್ಲಿ ಸ್ವಂತ ತಂದೆ-ತಾಯಿಯನ್ನೇ ಕಡೆಗಣಿಸುವ ಕೆಲವು ಮಕ್ಕಳನ್ನು ನೋಡಿದಾಗ ಮನಸ್ಸಿಗೆ ನೋವಾಗುತ್ತದೆ.
ತಂದೆ-ತಾಯಿಯೇ ನಮ್ಮ ಮೊದಲ ದೈವ, ಗುರುಗಳೇ ನಮ್ಮ ಬದುಕಿನ ದಾರಿ ತೋರಿಸುವ ಬೆಳಕು.
"ತಂದೆ ತಾಯಿಯೇ ದೈವ,
ಗುರುವೇ ನಮ್ಮ ಜೀವ"
ಎಂಬ ದಿವ್ಯ ಮಂತ್ರ ನಮ್ಮ ಹೃದಯದಲ್ಲಿ ಸದಾ ನೆಲೆಸಿರಲಿ. ತಂದೆ-ತಾಯಿಯನ್ನು ಪ್ರೀತಿಯಿಂದ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಲಿ.

5. ನಿಧನದ ನಂತರವೂ ಬೇರೆಯವರ ಬದುಕಿನಲ್ಲಿ ಬೆಳಕಾದವರು

ಪುನೀತ್ ಅವರು ನೇತ್ರದಾನಕ್ಕೆ ಸಂಕಲ್ಪ ಮಾಡಿದ್ದರು. 2021ರ ಅಕ್ಟೋಬರ್ 29ರಂದು ಅವರು ನಿಧನರಾದ ನಂತರ, ಅವರ ಕುಟುಂಬದವರು ಆ ಸಂಕಲ್ಪವನ್ನು ಈಡೇರಿಸಿದರು. ಅವರ ಕಣ್ಣುಗಳ ಕಾರ್ನಿಯಾಗಳನ್ನು ದಾನ ಮಾಡುವ ಮೂಲಕ ಬೇರೆಯವರ ಬದುಕಿನಲ್ಲಿ ಬೆಳಕಾಗುವ ಕಾರ್ಯಕ್ಕೆ ಕಾರಣರಾದರು.
ತಮ್ಮ ಬದುಕಿನಲ್ಲಷ್ಟೇ ಅಲ್ಲ, ನಿಧನದ ನಂತರವೂ ಇತರರಿಗೆ ನೆರವಾಗುವ ಮೂಲಕ ಸಾರ್ಥಕತೆಯ ಸಂದೇಶ ಸಾರಿದ ಪುನೀತ್ ಸರ್ ಅವರ ಜೀವನ ಪ್ರತಿಯೊಬ್ಬರಿಗೂ ಸ್ಫೂರ್ತಿಯಾಗಬೇಕು.
ನಾವು ಬದುಕಿರುವಾಗ ಮಾಡುವ ಒಳ್ಳೆಯ ಕೆಲಸಗಳು ನಮ್ಮನ್ನು ಪ್ರೀತಿಸುವಂತೆ ಮಾಡುತ್ತವೆ; ನಮ್ಮ ನಂತರವೂ ಬೇರೆಯವರ ಬದುಕಿಗೆ ಬೆಳಕಾಗುವ ಕಾರ್ಯಗಳು ನಮ್ಮನ್ನು ಸದಾ ನೆನಪಿಸುವಂತೆ ಮಾಡುತ್ತವೆ.

ಇವರಿಂದ ನಾವು ಕಲಿಯಬೇಕಾದ ಜೀವನದ ಪಾಠಗಳು

- ಎಷ್ಟೇ ದೊಡ್ಡ ವ್ಯಕ್ತಿಯಾದರೂ ಮಾನವೀಯತೆಯೇ ನಮ್ಮ ನಿಜವಾದ ಸಂಪತ್ತು.
- ನಮ್ಮಿಂದ ಸಾಧ್ಯವಾದಷ್ಟು ಇತರರಿಗೆ ಸಹಾಯ ಮಾಡುವ ಗುಣವನ್ನು ಬೆಳೆಸಿಕೊಳ್ಳಬೇಕು.
- ಪ್ರತಿಯೊಂದು ಮಗುವಿಗೂ ಶಿಕ್ಷಣ ದೊರೆಯುವಂತೆ ಮಾಡುವುದು ನಮ್ಮೆಲ್ಲರ ಕರ್ತವ್ಯ.
- ಒಳ್ಳೆಯ ಕೆಲಸಗಳನ್ನು ಪ್ರಚಾರಕ್ಕಾಗಿ ಮಾಡದೆ, ಮಾನವೀಯತೆಯಿಂದ ಮಾಡಬೇಕು.
- ನಮ್ಮ ಜೀವನ ಮುಗಿದರೂ, ಇತರರ ಜೀವನದಲ್ಲಿ ಬೆಳಕಾಗಬೇಕು.
- ಸರಳತೆಯೇ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ.
- ಆಡಂಬರದ ಬದುಕಿಗಿಂತ ನೆಮ್ಮದಿಯ ಜೀವನವೇ ಲೇಸು.
- ತೋರಿಕೆಗಾಗಿ ಕೆಲಸ ಮಾಡದೆ, ಆತ್ಮತೃಪ್ತಿಗಾಗಿ ಕೆಲಸ ಮಾಡಬೇಕು.
- ಜೀವನವು ನೀರಿನ ಮೇಲಿನ ಗುಳ್ಳೆಯಂತೆ ಕ್ಷಣಿಕ. ಅದು ಯಾವಾಗ ಒಡೆದು ಹೋಗುತ್ತದೆ ಎಂಬುದು ಯಾರಿಗೂ ತಿಳಿಯದು. ಆದ್ದರಿಂದ ಇರುವಷ್ಟು ದಿನ ನಗುತ್ತಾ, ಇತರರನ್ನು ನಗಿಸುತ್ತಾ, ಸಂತೋಷದಿಂದ ಬದುಕಬೇಕು.

ಜೊತೆಗಿರದ ನಗು
ಜೊತೆಗಿರದ ಆ ಮುಗ್ಧ ನಗು
ಜೊತೆಗಿರದ ನೀವು?
ಜೊತೆಗಿರದಿದ್ದರೂ,
ನಿಮ್ಮ ನೆನಪು ಎಂದೆಂದಿಗೂ ಜೀವಂತ.

ನೀವು ನಮ್ಮೊಂದಿಗಿಲ್ಲ ಎಂಬ ನೋವಿದೆ,
ಆದರೆ ನಮ್ಮ ಹೃದಯದಲ್ಲಿ ಸದಾ
ಜೀವಂತವಾಗಿರುವಿರಿ.

ನಿಮ್ಮ ಸ್ಫೂರ್ತಿದಾಯಕ ಜೀವನ,
ನಿಮ್ಮ ಸರಳತೆಯ ಬದುಕು,
ನಿಮ್ಮ ನಗುಮುಖದ ವ್ಯಕ್ತಿತ್ವ,
ನಿಮ್ಮ ಪ್ರಾಮಾಣಿಕತೆ,
ನಿಮ್ಮ ಸೇವಾ ಮನೋಭಾವ,
ನೀವು ತೋರಿಸಿದ ಜೀವನದ ದಾರಿ?

ಇವೆಲ್ಲವೂ ನಮ್ಮ ಪಾಲಿಗೆ ಎಂದೆಂದಿಗೂ ಅಮೂಲ್ಯ.
ನೀವು ಇಂದು ನಮ್ಮ ಜೊತೆಯಲ್ಲಿ ಇಲ್ಲದಿರಬಹುದು,
ಆದರೆ ನಮ್ಮ ನೆನಪುಗಳಲ್ಲಿ ನೀವು ಸದಾ ಅಮರ.
ದೇಹ ದೂರವಾದರೂ ಆತ್ಮೀಯತೆ ದೂರವಾಗದು.
ದೇಹ ದೂರವಾದರೂ ಪ್ರೀತಿ ದೂರವಾಗದು.
ನೀವು ಬಿಟ್ಟುಹೋದ ಒಳ್ಳೆಯತನ ಎಂದಿಗೂ
ಮರೆಯಾಗದು. ಅಪ್ಪು ನೀವು ಕೇವಲ ಒಬ್ಬ ನಟನಲ್ಲ,
ಕೋಟ್ಯಂತರ ಹೃದಯಗಳ ಭಾವನೆ.

ನಿಮ್ಮ ನಗು ನಮ್ಮ ನೆನಪು,
ನಿಮ್ಮ ಸೇವೆ ನಮ್ಮ ಸ್ಫೂರ್ತಿ,
ನಿಮ್ಮ ಬದುಕು ನಮಗೆ ಪಾಠ.
ಅಪ್ಪು ಅಮರ

ಗಂಗಾಶ್ರೀ ಮಾನ್ವಿ

ನಗರಸಭೆ ನಗರ ಸ್ವಚ್ಛತೆಗೆ ಮೊದಲ ಆದ್ಯತೆ ನೀಡಲಿ: ಹಿರಿಯ ನಾಗರಿಕ ವಿಶ್ವನಾಥ ಶರ್ಮ ಮನವಿ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ಕೇಂದ್ರ ಬಸ್ ನಿಲ್ದಾಣದ ಮುಂಭಾಗದಲ್ಲಿರುವ ಚರಂಡಿಗಳಲ್ಲಿ ಹೂಳು ತುಂಬಿಕೊಂಡಿದ್ದು, ಜೊತೆಗೆ ದಿನ ನಿತ್ಯವೂ ಸಹಸ್ರಾರು ಸಂಖ್ಯೆಯಲ್ಲಿ ಬಂದು ಹೋಗುವ ಸ್ಥಳವಾದ್ದರಿಂದ ಚರಂಡಿ ದುರ್ನಾತ ಬೀರಿ, ಸಾರ್ವಜನಿಕರಿಗೆ ತುಂಬಾ ತೊಂದರೆಯಾಗುತ್ತಿದೆ ಎಂದು ನಗರದ ನಿವಾಸಿ ಹಿರಿಯ ನಾಗರಿಕರಾದ ವಿಶ್ವನಾಥ ಶರ್ಮ ಹೇಳಿದರು.



ಇದರಿಂದಾಗಿ ನಗರದಲ್ಲಿ ಸೊಳ್ಳೆಗಳ ಕಾಟವು ಹೆಚ್ಚಾಗಿದ್ದು, ಮಲೇರಿಯಾ, ಡೆಂಗ್ಯೂನಂತಹ ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯಲ್ಲಿ ನಗರದ ಜನತೆ ಇದ್ದಾರೆ. ಇತ್ತೀಚೆಗೆ ಸುಮಾರು ದಿನಗಳಿಂದ ನಗರಸಭೆಯ ಸಿಬ್ಬಂದಿಗಳು ಸ್ವಚ್ಚತೆ ಕಡೆಗೆ ಆದ್ಯತೆ ಕೊಡುತ್ತಿಲ್ಲ. ರಸ್ತೆಗಳು ಸಹ ಧೂಳು ತುಂಬಿ ಹೋಗಿವೆ, ಈ ಕಾರಣವಾಗಿ ಸಾರ್ವಜನಿಕರು ನಗರಸಭೆ ಪೌರಾಯುಕ್ತರಿಗೆ ಹಾಗೂ ಸಿಬ್ಬಂದಿಗಳಿಗೆ ಇಡೀ ಶಾಪ ಹಾಕುತ್ತಿದ್ದಾರೆ. ಕೂಡಲೇ ನಗರಸಭೆಯವರು ಎಚ್ಚೆತ್ತುಕೊಂಡು ನಗರದ ಸ್ವಚ್ಚತೆ, ಚರಂಡಿಗಳ ಸ್ವಚ್ಚತೆ, ಧೂಳು ಮುಕ್ತ ನಗರವಾಗಿ ಮಾಡಿ, ಸಾರ್ವಜನಿಕರ ಹಿತ ಬಯಸಿ ಸಾಂಕ್ರಾಮಿಕ ರೋಗಗಳು ಹರಡುವುದನ್ನು ತಪ್ಪಿಸಬೇಕಿದೆ. ತಕ್ಷಣವೇ ನಗರಸಭೆ ಪೌರಾಯುಕ್ತರು ಇತ್ತ ಕಡೆಗೆ ಗಮನ ಹರಿಸಿ ನಗರದ ಜನತೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಮಾಡಬೇಕಿದೆ ಎಂದು ಹಿರಿಯ ನಾಗರಿಕರು ಮನವಿ ಮಾಡಿಕೊಂಡಿದ್ದಾರೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು
ತಪ್ಪದೆ ಓದಿರಿ.

ಧರ್ಮಸ್ಥಳ ಟ್ರಸ್ಟ್ ದಿಂದ ಆರ್ಥಿಕ ಸಹಾಯ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಪಟ್ಟಣದ ರಾಜವಾಡೆಯಲ್ಲಿರುವ ಪುರಾತನ ದೇವಸ್ಥಾನವಾಗಿರುವ ಶ್ರೀ ಮೂಲಸ್ಥಾನೇಶ್ವರ(ಮಹಾದೇವ) ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಯೋಜನೆ ವತಿಯಿಂದ (2,50,000)ಎರಡು ಲಕ್ಷದ ಐವತ್ತು ಸಾವಿರ ರೂಪಾಯಿ ದೇಣಿಗೆಯ ಚೆಕ್ ನ್ನು ದೇವಸ್ಥಾನ ಸಮಿತಿಯ ಅಧ್ಯಕ್ಷರಿಗೆ ಹಸ್ತಾಂತ-ರಿಸಲಾಯಿತು.ಬುಧವಾರ ರಾಜವಾಡೆಯ ಶ್ರೀ ಮಹಾದೇವ ದೇವಸ್ಥಾನದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಟ್ರಸ್ಟ್ ಯೋಜನೆಯ ಜಿಲ್ಲಾ ನಿರ್ದೇಶಕರಾದ ಮೋಹನ್ ನಾಯಕ್ ಅವರು ರೂ. 2.50.000 ಚೆಕ್ ನ್ನು ಹಸ್ತಾಂತರಿಸಿ ಮಾತನಾಡಿ ನಮ್ಮ ಟ್ರಸ್ಟ್ ಅಡಿಯಲ್ಲಿ ಹಲವಾರು ಸೇವಾ ಕಾರ್ಯಗಳನ್ನು ಜಾತಿ ಮತ ಭೇದವಿಲ್ಲದೆ ಮಾಡಲಾಗುತ್ತಿದೆ ಇದಕ್ಕೆ ನಮಗೆ ಶ್ರೀ ಮಂಜುನಾಥನೇ ಪ್ರೇರಣೆಯಾಗಿದ್ದಾನೆ.



ಇವತ್ತು ಈ ದೇವಸ್ಥಾನದ ಕಾಮಗಾ-ರಿಗಾಗಿ ಎರಡುವರೆ ಲಕ್ಷ ದೇಣಿಗೆಯನ್ನು ಶ್ರೀ ಮಂಜುನಾಥನ ಪ್ರಸಾದದ ರೂಪದಲ್ಲಿ ಕೊಡುತ್ತಿದ್ದೇವೆ, ಧರ್ಮಸ್ಥಳ ಟ್ರಸ್ಟ್ ವತಿಯಿಂದ ನಡೆಯುವ ಎಲ್ಲಾ ಸಮಾಜಮುಖಿ ಕಾರ್ಯಗಳಲ್ಲಿ ತಮ್ಮೆಲ್ಲರ ಸಹಕಾರ ಇರಲಿ ಎಂದರು. ಕಾರ್ಯಕ್ರಮದಲ್ಲಿ ಸಮಾಜದ ಪ್ರಮುಖರಾದ ಬಾಳು ಬಕ್ಷಿ, ಜನಜಾಗೃತಿ ಸಮಿತಿ ಜಿಲ್ಲಾ ಅಧ್ಯಕ್ಷರಾದ ವಾಸುದೇವ ಹೆಬಸೂರ ಅವರು ಮಾತನಾಡಿ ಧರ್ಮಸ್ಥಳದ ಸೇವಾ ಕಾರ್ಯಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಅರ್ಚಕರಾದ ಸಂತೋಷ್ ಜೋಶಿ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು. ದೇವಸ್ಥಾನ ಸಮಿತಿಯ ಅಧ್ಯಕ್ಷರಾದ ಅಪ್ಪಾಸಾಹೇಬಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ವತಿಯಿಂದ ಜಿಲ್ಲಾ ನಿರ್ದೇಶಕ ಮೋಹನ್ ನಾಯಕ್ ಇವರಿಗೆ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ತಾಲೂಕಾ ಯೋಜನಾಧಿಕಾರಿ ಶಿವಾನಂದ,

ವಲಯ ಮೇಲ್ವಿಚಾರಕಿ ಶೋಭಾ, ಜಾಗೃತಿ ಸಮಿತಿಯ ಸುವರ್ಣಾ ಬಿರಾದಾರ, ಡಿ. ವಿ. ಪಾಟೀಲ್, ಅಣ್ಣಾರಾವ್ ಜಗತಾಪ, ಮುದುಕಪ್ಪ ಬಡಿಗೇರ , ಪ್ರಕಾಶ ಸಾಸಬಾಳ, ರವಿ ಮಠಪತಿ ಶಶಿಧರ ಡಿಸಲೆ, ಗುರುಸಂಗಪ್ಪ ಕಶೆಟ್ಟಿ, ರಾಜು ಸಂಡೂರ, ಚಂದ್ರು ಮಠಪತಿ, ರಮೇಶ್ ಮೂಕಿಹಾಳ, ರಾಘು ಮಾನೆ, ಭೀಮನಗೌಡ ಪಾಟೀಲ ಮತ್ತಿತರರು ಇದ್ದರು.

ಪರಿಷತ್ ಚುನಾವಣೆ ಗೆಲುವಿನ ನಾಗಾಲೋಟ: ಕಂಪ್ಲಿಯಲ್ಲಿ ಕೇಸರಿ ಪಡೆ ಭರ್ಜರಿ ವಿಜಯೋತ್ಸವ ಆಚರಿಸಿದ ಕಾರ್ಯಕರ್ತರು

ನೈಜ್ಯ ದೆಸೆ ನ್ಯೂಸ್

ಕಂಪ್ಲಿ: ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟ ಭರ್ಜರಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ, ಇಲ್ಲಿನ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಬುಧವಾರ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು.

ಬಿಜೆಪಿ ಬಳ್ಳಾರಿ ಜಿಲ್ಲಾ ಉಪಾಧ್ಯಕ್ಷ ಅಳ್ಳಳ್ಳಿ ವೀರೇಶ್, "ವಿಧಾನ ಪರಿಷತ್ ಚುನಾವಣೆಯ ಈ ಗೆಲುವು ಮುಂಬರುವ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಮೇಲೂ ಸಕಾರಾತ್ಮಕ ಪ್ರಭಾವ ಬೀರಲಿದೆ. ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಜನಪರ ಆಡಳಿತಕ್ಕೆ ಸಿಕ್ಕ ಜಯ ಇದಾಗಿದ್ದು, ಮುಂಬರುವ ದಿನಗಳಲ್ಲಿ ರಾಜ್ಯದಲ್ಲಿಯೂ ಬಿಜೆಪಿ ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ," ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಂಪ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಸಿ.ಡಿ. ಮಹಾದೇವ್ ಮಾತನಾಡಿ, "ರಾಜ್ಯದಲ್ಲಿ ಮುಂಬರುವ ಚುನಾವಣೆಗಳಲ್ಲಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ಪಕ್ಷವನ್ನು ಸಂಘಟಿಸಿ, ಮರಳಿ ಅಧಿಕಾರಕ್ಕೆ ತರಲು ಶ್ರಮಿಸಲಾಗುವುದು," 2028ಕ್ಕೆ ನಮದೇ ಗೆಲವು ಎಂದರು.

ಬಿಜೆಪಿ ಮುಖಂಡರಾದ ಬಿಎಲ್-



ಎಲ್‌ಎಂ ಗೋಕರ್ಣ ಶ್ರೀನಿವಾಸ್, ವೈ. ಮುರುಳಿಮೋಹನರೆಡ್ಡಿ, ಮಹಿಳಾ ಘಟಕದ ಟಿ. ರಬಿಯಾ ನಿಸಾರ್, ಪ್ರಮುಖರಾದ ಜಿ. ಶ್ರೀನಿವಾಸ್, ಜಿ.ಜೆ. ಚಂದ್ರಣ್ಣ, ಅಗಳಿ ಪಂಪಾಪತಿ, ಉಗಾದಿ ಶಿವರಾಜ್, ಬಿ. ದೇವೇಂದ್ರ, ಬಿ. ರಮೇಶ್, ಪ್ರಶಾಂತ್, ರಾಜು, ಸಿ.ಎ. ಚನ್ನಪರಂಗಸ್ವಾಮಿ, ಬಡಿಗೇರ್ ವೀರೇಶ್, ಮನೋಜ್‌ಗೌಡ ಸೇರಿದಂತೆ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಹಾಗೂಜ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಜಾಲಹಳ್ಳಿ ಸಾಮೂಹಿಕ ವಿವಾಹಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ್‌ರಿಂದ 76 ಬಂಗಾರದ ತಾಳಿ ಕೊಡುಗೆ

ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ಅಕ್ಟೋಬರ್ 29ರಂದು ನಡೆಯಲಿರುವ ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ್ ಅವರು 76 ಬಂಗಾರದ ತಾಳಿಗಳನ್ನು ಕೊಡುಗೆಯಾಗಿ ನೀಡಿದ್ದಾರೆ.

ಜಾಲಹಳ್ಳಿಯ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ಗೋವಿಂದ ಸೇವಾ ಸಮಿತಿ ವತಿಯಿಂದ ಆಯೋಜಿಸಿರುವ ಸಾಮೂಹಿಕ ವಿವಾಹದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಡಲಿರುವ ಜೋಡಿಗಳಿಗೆ ನೆರವಾಗುವ ಉದ್ದೇಶದಿಂದ ಶಾಸಕಿ ಕರೆಮ್ಮ ಜಿ. ನಾಯಕ್ ಅವರು ಸತತ ಮೂರನೇ ವರ್ಷವೂ 76 ಬಂಗಾರದ ತಾಳಿಗಳನ್ನು ನೀಡಿರುವುದು ಶ್ಲಾಘನೀಯ ಕಾರ್ಯವಾಗಿದೆ. ಅವರ ಈ ಕೊಡುಗೆ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಶಾಸಕಿ ಕರೆಮ್ಮ ಜಿ. ನಾಯಕ್ ಅವರ ಪರವಾಗಿ ಅವರ ಸಹೋದರ ತಿಮ್ಮಾರೆಡ್ಡಿ ಚಿತಲಕುಂಟ ಅವರು ಬಂಗಾರದ ತಾಳಿಗಳನ್ನು ಶ್ರೀ ರಂಗನಾಥ ಗೋವಿಂದ ಸೇವಾ ಸಮಿತಿಯ ಪದಾಧಿಕಾರಿಗಳಿಗೆ ಹಸ್ತಾಂತರಿಸಿದರು. ಸಮಿತಿಯ ಪರವಾಗಿ ವೆಂಕೋಬ ಪೂಜಾರಿ ಹಾಗೂ ಚಂದ್ರಕಾಂತ್ ಚಿಕ್ಕಲ್ ಅವರು ತಾಳಿಗಳನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಭೀಮಣ್ಣ ಗೋಸಲ್, ನಿವೃತ್ತ ಶಿಕ್ಷ ವಿಠೋಬಾ ನಾಯಕ್*ಜಾಲಹಳ್ಳಿ! ಬ್ರೇಕಿಂಗ್ ನ್ಯೂಸ್ ಜಾಲಹಳ್ಳಿ ಸಾಮೂಹಿಕ ವಿವಾಹಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ್‌ರಿಂದ 76 ಬಂಗಾರದ ತಾಳಿ ಕೊಡುಗೆ ಸತತ ಮೂರನೇ ವರ್ಷವೂ ನವಜೋಡಿಗಳಿಗೆ ನೆರವು;



ಶಾಸಕಿಯ ಕಾರ್ಯಕ್ಕೆ ಸಾರ್ವಜನಿಕರ ಮೆಚ್ಚುಗೆ ಜಾಲಹಳ್ಳಿ, ಅ. 28:* ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ಅಕ್ಟೋಬರ್ 29ರಂದು ನಡೆಯಲಿರುವ ಸಾಮೂಹಿಕ ವಿವಾಹ ಕಾರ್ಯಕ್ರಮಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ್ ಅವರು 76 ಬಂಗಾರದ ತಾಳಿಗಳನ್ನು ಕೊಡುಗೆಯಾಗಿ ನೀಡಿದ್ದಾರೆ.

ಜಾಲಹಳ್ಳಿಯ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ಗೋವಿಂದ ಸೇವಾ ಸಮಿತಿ ವತಿಯಿಂದ ಆಯೋಜಿಸಿರುವ ಸಾಮೂಹಿಕ ವಿವಾಹದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಡಲಿರುವ ಜೋಡಿಗಳಿಗೆ ನೆರವಾಗುವ ಉದ್ದೇಶದಿಂದ ಶಾಸಕಿ ಕರೆಮ್ಮ ಜಿ. ನಾಯಕ್ ಅವರು ಸತತ ಮೂರನೇ ವರ್ಷವೂ 76 ಬಂಗಾರದ ತಾಳಿಗಳನ್ನು ನೀಡಿರುವುದು ಶ್ಲಾಘನೀಯ ಕಾರ್ಯವಾಗಿದೆ. ಅವರ ಈ ಕೊಡುಗೆ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಶಾಸಕಿ ಕರೆಮ್ಮ ಜಿ. ನಾಯಕ್ ಅವರ ಪರವಾಗಿ ಅವರ ಸಹೋದರ ತಿಮ್ಮಾರೆಡ್ಡಿ ಚಿತಲ್ ಕುಂಟ ಅವರು ಬಂಗಾರದ ತಾಳಿಗಳನ್ನು ಶ್ರೀ ರಂಗನಾಥ ಗೋವಿಂದ ಸೇವಾ ಸಮಿತಿಯ ಪದಾಧಿಕಾರಿಗಳಿಗೆ ಹಸ್ತಾಂತರಿಸಿದರು. ಸಮಿತಿಯ ಪರವಾಗಿ ವೆಂಕೋಬ ಪೂಜಾರಿ ಹಾಗೂ ಚಂದ್ರಕಾಂತ್ ಚಿಕ್ಕಲ್ ಅವರು ತಾಳಿಗಳನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಭೀಮಣ್ಣ ಗೋಸಲ್, ನಿವೃತ್ತ ಶಿಕ್ಷಕರಾದ ವಿಠೋಬ ನಾಯಕ್, ಗೋವಿಂದರಾಜ್ ನಾಯಕ್ ತಿಂಪುರ್, ಶಿವನಗೌಡ ವಂದಲಿ, ಹುಸೇನಪ್ಪ ಗುತ್ತೇದಾರ, ನಿವೃತ್ತ ಪೊಲೀಸ್ ಅಧಿಕಾರಿ ದೇವಪ್ಪಕುದರಿ, ಸಿದ್ದನಗೌಡ ಹಂಪರಗುಂದಿ, ಅಮರೇಶ್ ಪಾಟೀಲ್, ನರಸಣ್ಣ ನಾಯಕ, ಶಂಕರಗೌಡ, ತಿಮ್ಮಣ್ಣ ನಾಯಕ ದಿವಾನ್, ತಿಮ್ಮಣ್ಣ ಮೆಕ್ಯಾನಿಕ್, ರಂಗನಾಥ್ ಮುರಾಳ್, ರಂಗಪ್ಪ ಕಾವಲಿ, ಬಸವರಾಜ್ ತೋಟದಮನೆ, ಸಿದ್ದಪ್ಪ ಗುಮೆದಾರ್, ರಮೇಶ್ ಅನ್ವರಿ, ಗೋವಿಂದಪ್ಪ ಅಲಗೇರಿ, ಗಂಗಪ್ಪ ತೆಗ್ಗೆಳ್ಳಿ, ಯಾಸಿನ್ ಮುಲ್ಲಾ ಹಾಗೂ ಖುರ್ಷಿದ್ ಪಟೇಲ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101